ಶ್ರೀ ಬಿ. ರಾಚಯ್ಯ.— ಇದನ್ನು ಪತ್ತೆ ಹಚ್ಚುವುದಕ್ಕಾಗಿಯೇ ನಮ್ಮ ಡಿ. ಐ. ಜಿ. ಯವರನ್ನು ಅಲ್ಲಿ ಇಟ್ಟಿದ್ದೇವೆ. ಅದಕ್ಕಾಗಿ ಇಲ್ಲಿಯ ರೈಲ್ವೆ ಅಧಿಕಾರಿಗಳ ಜೊತೆಯಲ್ಲಿಯೂ ಚರ್ಚೆ ಮಾಡಿರುತ್ತೇವೆ, ಮತ್ತು ಕೇಂದ್ರ ಸರ್ಕಾರದ ರೈಲ್ವೆ ಮಂತ್ರಿಗಳ ಜೊತೆಯಲ್ಲೂ ಸಹ ಪದೇ ಪದೇ ಹೋಗಿ ಒತ್ತಾಯ ಮಾಡುತ್ತಿದ್ದೇವೆ. ಕರ್ನಾಟಕ ರಾಜ್ಯದಲ್ಲಿ ಓಡಾಡತಕ್ಕಂಥ ರೈಲ್ವೆಗಳಿಗೆ ಶಸ್ತ್ರಸಜ್ಜಿತ ಪೋಲೀಸ್ ಅಧಿಕಾರಿಗಳನ್ನೊಳಗೊಂಡಂತೆ, ರೈಲುಗಳು ಓಡಾಡುವಂತೆ ಮಾಡಿ ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಂಡಿರುತ್ತೇನೆ.

ಶ್ರೀ ಆರ್. ರಾಮಯ್ಯ.— ರೈಲ್ವೆಯಲ್ಲಿ ಆಗತಕ್ಕಂಥ ದರೋಡೆ ಯಾವ ರೀತಿಯಾಗಿ ನಡೆಯುತ್ತಿದೆ ಎಂದರೆ ಕಳ್ಳರು ದರೋಡೆ ಮಾಡಿಕೊಂಡು ಹೋದ ಮೇಲೆ ಕೆಲವು ಸಂಗತಿಯನ್ನು ತಿಳಿಸಿದರೆ ತಕ್ಷಣ ಬಂದು ಕ್ರಮ ತೆಗೆದುಕೊಳ್ಳುವುದಿಲ್ಲ. ಎ.ಎಸ್.ಐ. ಗೆ ತಿಳಿಸಿದರೆ ಇದನ್ನು ಸರ್ಕಲ್ ಇನ್‌ಸ್ಪೆಕ್ಟರ್‌ಗವರಿಗೆ ತಿಳಿಸಬೇಕೆಂದು ಹೇಳುತ್ತಾರೆ. ಅಲ್ಲಿಯವರೆಗೆ ಏನು ಕ್ರಮ ತೆಗೆದುಕೊಳ್ಳುವಂತೆ ಇಲ್ಲ. ಆದ್ದರಿಂದ ಇದರ ಬಗ್ಗೆ ಸೂಕ್ತ ತಿಳುವಳಿಕೆಯನ್ನು ಕೊಡಬೇಕು. ಮತ್ತು ಬೆಂಗಳೂರಿನಲ್ಲಿ ಪುನಃ ದರೋಡೆಗಳು ನಡೆಯುತ್ತಿರುತ್ತವೆ. ಒಬ್ಬ ಮರ್ಚೆಂಟ್‌ನ್ನು ಲೂಟಿಮಾಡಿ ಸುಮಾರು ೧೨,೦೦೦ ರೂಪಾಯಿಗಳನ್ನು ದೋಚಿಕೊಂಡು ಹೋಗಿರುತ್ತಾರೆ. ಇದರ ಬಗ್ಗೆ ತುರ್ತು ಗಮನಕೊಟ್ಟು ಪೋಲೀಸ್‌ನವರಿಂದ ಆಗುತ್ತಿರುವ ನಿರ್ಲಕ್ಷ್ಯತನವನ್ನು ತಪ್ಪಿಸಬೇಕು.

ಶ್ರೀ ಬಿ. ರಾಚಯ್ಯ.— ಪೋಲೀಸರಿಂದ ನಿರ್ಲಕ್ಷ್ಯತನವಾಗುತ್ತಿಲ್ಲ ರೈಲ್ವೆ ದರೋಡೆ ನಮ್ಮ ಬಾರ್ಡರ್‌ನಲ್ಲಿ ಆಗಿರುವುದರಿಂದ ಅದು ನಮ್ಮ ರಾಜ್ಯಕ್ಕೆ ಬರುವುದಕ್ಕೆ ಮೊದಲೇ ನಡೆದಿರತಕ್ಕಂಥದ್ದೇ, ಅಥವಾ ಬಂದಮೇಲೆ ನಡೆದಿರತಕ್ಕಂಥದ್ದೇ ಎನ್ನುವ ಬಗ್ಗೆ ಬಹುಶ: ಮೂರು ರಾಜ್ಯಗಳ ಪೋಲೀಸ್ ಅಧಿಕಾರಿಗಳು ಸಮಾಲೋಚನೆ ಮಾಡಬೇಕಾಗಿರುತ್ತದೆ. ಬೆಂಗಳೂರಿನಲ್ಲಿ ಈಗ ದಿನನಿತ್ಯ ಆಗುತ್ತಿದ್ದ ಕಳ್ಳತನ ಇದರ ಸಂಖ್ಯೆ ಕಡಿಮೆಯಾಗಿದೆ ಎಂದು ಹೇಳುತ್ತೇನೆ. ಜನಸಂಖ್ಯೆ ವಿಪರೀತವಾಗಿರುವಾಗ ಸಂಪೂರ್ಣವಾಗಿ ಇದು ಇಲ್ಲದಹಾಗೆ ಮಾಡುತ್ತೇನೆ ಎಂದು ಹೇಳತಕ್ಕಂಥ ಪರಿಸ್ಥಿತಿಯಲ್ಲಿ ನಾನು ಇಲ್ಲ.

## BREACH OF PRIVILEOE NOTICE.

*Reg. Statement by the Home Minister involvoing the leader of the opposition n at Criminal nspiracy.—*

ಅಧ್ಯಕ್ಷರು.— ಮಾನ್ಯ ಬಂಗಾರಪ್ಪನವರು ಪ್ರಿವಿಲೇಜ್ ಮೋಷನ್ ಬಗ್ಗೆ ಮಾತನಾಡಬಹುದು.

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಸಭಾಧ್ಯಕ್ಷರೇ, ಯಮಾವಳಿ ೧೮೦ರ ಪ್ರಕಾರ ಒಂದು ಹಕ್ಕುಬಾಧ್ಯತಾ ನಿರ್ಣಯವನ್ನು ಮಾನ್ಯ ಗೃಹಸಚಿವರಾದ ಶ್ರೀ ರಾಚಯ್ಯನವರ ವಿರುದ್ಧ ಕಳುಹಿಸಿ ಕೊಟ್ಟಿದ್ದೇನೆ. ಇದರ ಬಗ್ಗೆ ನಾನು ನಮ್ಮ ಪಕ್ಷದ ಬಹುಪಾಲು ಸದಸ್ಯರು ಎಲ್ಲರೂ ಕೂಡ ಈ ವಿಷಯ ಇರತಕ್ಕಂಥದ್ದು

> "Sri B. Rachaiah Minister for Home while replying to the discussion on the demands of Home Department has committed breach of privilege of this House by producing doubtful, irrelevant, illegal, improper and false document intending to involve the names of the Leader of the Opposition in the Legislative Assembly in a criminal conspiracy knowingly fully well that it was not admissible either on the floor of the House or in the court and thereby misleading the House for creating a false impression against the Leader of the Opposition in the Legislative Assembly."

ಈ ಒಂದು ನಿರ್ಣಯಂವನ್ನು ಕಳುಹಿಸಿಕೊಡತಕ್ಕಂಥ ಸಂದರ್ಭವನ್ನು ನಾವು ನಮ್ಮ ನೋಟೀಸ್‌ನಲ್ಲಿಯೂ ಕೂಡ ಸ್ಪಷ್ಟವಾಗಿ ತಿಳಿಯಪಡಿಸಿದ್ದೇವೆ. ಈ ಪೋಲೀಸ್ ಇಲಾಖೆಗೆ ಸಂಬಂಧಪಟ್ಟಹಾಗೆ ಬೇಡಿಕೆಗಳ ಮೇಲೆ ಚರ್ಚೆಯಾಗತಕ್ಕಂಥ ಸಂದರ್ಭದಲ್ಲಿ ಮಾನ್ಯ ಗೃಹಸಚಿವರು ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಅವರು ಒಂದು ಹೇಳಿಕೆಯನ್ನು ಕೊಟ್ಟು ಮತ್ತೊಬ್ಬ ವ್ಯಕ್ತಿ ಹೇಳಿಕೆಯನ್ನು ಕೊಟ್ಟಿದ್ದಾನೆ ಎನ್ನತಕ್ಕಂಥ ವಿಚಾರವನ್ನು ಪ್ರಸ್ತಾಪ ಮಾಡಿ ಇಲ್ಲಿ ಉತ್ತರವನ್ನು ಕೊಟ್ಟಿದ್ದಾರೆ. ಆ ಉತ್ತರವನ್ನು ಕೊಟ್ಟಿರ ತಕ್ಕಂಥದ್ದು......

ಶ್ರೀ ಬಿ. ಜಿ. ಕೊಟ್ರಪ್ಪ.— ಮಾನ್ಯ ಅಧ್ಯಕ್ಷರೇ ನನ್ನದೊಂದು ಕ್ರಿಯಾಲೋಪ. ನಿಯಮ ೧೯೦ರ ಪ್ರಕಾರ ಪ್ರಿವಿಲೇಜ್ ಮೋಷನ್......

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಅಧ್ಯಕ್ಷರೇ, ನಿನ್ನೆ ಈ ವಿಷಯದ ಬಗ್ಗೆ ಚರ್ಚೆಯಾಗತಕ್ಕಂಥ ಸಂದರ್ಭದಲ್ಲಿ ನಾಳೆಯ ದಿವಸ ಈ ವಿಷಯ ಪ್ರಸ್ತಾಪ ಆಗುವಾಗ ಯಾರೂ ಕೂಡ ಮಧ್ಯೆ ಪ್ರಸ್ತಾಪ ಮಾಡಬಾರದು ಎಂದು ತಾವೇ ಹೇಳಿದ್ದಿರಿ.

ಅಧ್ಯಕ್ಷರು.— ಸಂಬಂಧಪಟ್ಟ ಮಂತ್ರಿಗಳು ಮತ್ತು ತಮಗೆ ಒಬ್ಬರಿಗೆ ಭಾಷಣ ಮಾಡಲಿಕ್ಕೆ ಅವಕಾಶ ಕೊಟ್ಟಿದ್ದೇನೆ.

ಶ್ರೀ ಧರ್ಮಸಿಂಗ್.— ಮಾನ್ಯ ಅಧ್ಯಕ್ಷರೇ ಪದೇ ಪದೇ ಸದಸ್ಯರುಗಳಿಗೆ ಕ್ರಿಯಾಲೋಪ ಎತ್ತು ವುದಕ್ಕೆ ಅವಕಾಶ ಮಾಡಿಕೊಡುತ್ತಿದ್ದೀರಿ. ಮಾನ್ಯ ವೀರಪ್ಪಮೊಯ್ಲಿಯವರು ನಿನ್ನೆದಿವಸ ಪಾಯಿಂಟ್ ಆಫ್ ಆರ್ಡರ್ ಎತ್ತಲಿಕ್ಕೆ ಅವಕಾಶವನ್ನು ಕೊಡಲಿಲ್ಲ. ಉದ್ದೇಶಪೂರ್ವಕವಾಗಿ ಮಾನ್ಯ ಸದಸ್ಯರು ಕ್ರಿಯಾಲೋಪವನ್ನು ಎತ್ತುತ್ತಿರತಕ್ಕಂಥ ಪ್ರಸಂಗವಿರುತ್ತದೆ.

ಶ್ರೀ ಬಿ. ಜಿ. ಕೊಟ್ರಪ್ಪ.— ಮಾನ್ಯ ಧರ್ಮಸಿಂಗ್‌ರವರ ವಕಾಲತ್ತು ಬೇಕಾಗಿಲ್ಲ. ನಾನು ನೇರವಾಗಿ ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದೇನೆ.

ಶ್ರೀ ಧರ್ಮಸಿಂಗ್.— ನಿನ್ನೆ ಈ ಸದನದಲ್ಲಿ ನಡೆದಂಥ ವಿಷಯದ ಅನುಭವದಮೇಲೆ ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಗೃಹಸಚಿವರು ಮಾನ್ಯ ವಿರೋಧಪಕ್ಷದ ನಾಯಕರಮೇಲೆ ಹೇಳಿರು ತ್ತಾರೆ. ಈಗ ಅವರು ಅದರ ಬಗ್ಗೆ ಏನು ಹೇಳುತ್ತಾರೋ ಹೇಳುವುದಕ್ಕೆ ಅವಕಾಶ ಕೊಡಿ. ಆಮೇಲೆ ಅವರು ಏನು ಹೇಳುತ್ತಾರೋ ಹೇಳಲಿ. ಅದಕ್ಕೆ ಅವಕಾಶಕೊಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.— ಮಾನ್ಯ ಸಭಾಧ್ಯಕ್ಷರೇ......

ಅಧ್ಯಕ್ಷರು.— ಮಾನ್ಯ ಸದಸ್ಯರು ಹೊಸಬರು ಇರುತ್ತಾರೆ. ಅವರು ಪಾಯಿಂಟ್ ಆಫ್ ಆರ್ಡರ್ ತ್ತಿದ್ದಾರೆ. ಅದು ಏನು ಹೇಳಲಿ.

ಶ್ರೀ ಧರ್ಮಸಿಂಗ್.— ಇಲ್ಲಿ ಮಧ್ಯೆ ಮಧ್ಯೆ ಪಾಯಿಂಟ್ ಆಫ್ ಆರ್ಡರ್‌ಗೆ ಅವಕಾಶವಿಲ್ಲವೆಂದು ನಿನ್ನೆ ದಿವಸ ಹೇಳಿ ಮತ್ತೆ ಅವಕಾಶವನ್ನು ಕೊಡತಕ್ಕಂಥದ್ದನ್ನೇ ಅನುಸರಿಸುತ್ತಿದ್ದೀರಿ.

ಅಧ್ಯಕ್ಷರು.— ಮಾನ್ಯ ಮಂತ್ರಿಗಳಿಗೆ ಅವಕಾಶವನ್ನು ಕೊಟ್ಟಿಲ್ಲ ಈಗ ಅವರು ಏನು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ ಅದರ ಬಗ್ಗೆ ಏನು ಹೇಳುತ್ತಾರೋ ಮೊದಲು ಹೇಳಲಿ.

ಶ್ರೀ ಧರ್ಮಸಿಂಗ್.— ಉದ್ದೇಶಪೂರ್ವಕವಾಗಿ ಆ ಕಡೆಯ ಮಾನ್ಯ ಸದಸ್ಯರುಗಳು ಪಾಯಿಂಟ್ ಆಫ್ ಆರ್ಡರ್ ಎತ್ತಿ ವಿರೋಧಪಕ್ಷದ ನಾಯಕರು ಯಾವ ಒಂದು ವಿಷಯವನ್ನು ಪ್ರಸ್ತಾಪ ಮಾಡ ಲಿಕ್ಕೊಬಿಡದೆ ಅಡ್ಡಿಯನ್ನು ಉಂಟು ಮಾಡಲಿಕ್ಕೆ ಅವಕಾಶ ಕೊಡುತ್ತಿದ್ದೀರಿ.

ಅಧ್ಯಕ್ಷರು.— ಮಾನ್ಯ ಸದಸ್ಯರು ಪಾಯಿಂಟ್‌ಆಫ್ ಆರ್ಡರ್ ಎತ್ತಿದ್ದಾರೆ. ಎತ್ತಲಿ ಬಿಡಿ. ಅದಕ್ಕೆ ಅವಕಾಶ ಕೊಡಬಾರದು ಎಂದು ಹೇಳುತ್ತೀರಾ ?

ಶ್ರೀ ಧರ್ಮಸಿಂಗ್.— ಹಾಗಾದರೆ ಎಲ್ಲರಿಗೂ ಅವಕಾಶವನ್ನು ಮಾಡಿಕೊಡಿ.

ಅಧ್ಯಕ್ಷರು.— ಯಾರಿಗೂ ಕೊಡುವುದಿಲ್ಲ.

ಶ್ರೀ ಎಂ. ವೀರಪ್ಪಮೊಯ್ಲಿ.— ಯಾವ ರೂಲ್ ಪ್ರಕಾರ ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ. ? ವ್ಯಾಕ್ಯೂಮ್‌ನಲ್ಲಿ ಪಾಯಿಂಟ್ ಆಫ್ ಆರ್ಡರ್ ಎತ್ತಲಿಕ್ಕೆ ಅವಕಾಶವನ್ನು ಹೇಗೆ ಕೊಟ್ಟಿರಿ. ದಯವಿಟ್ಟು......

ಅಧ್ಯಕ್ಷರು.— ನನಗೆ ಗೊತ್ತಿದೆ.

SRI. M. VEERAPPA MOILY— Now we are in a vacoum. The hon. Speaker has permitted the hon'ble leader of the opposition to raise certain matter. He has not stated any. thing ಅವರು ರೂಲ್ ಒಳಗೆ ಮಾಡ ತಕ್ಕಂಥ ಹೇಳಿಕೆಯನ್ನು ಕೊಡಲು He has just started. So, we are absolutely in a vacum. ವ್ಯಾಕ್ಯೂಮ್‌ನಲ್ಲಿರುವಾಗ ತಾವು ಯಾವ ರೂಲ್ ಪ್ರಕಾರ ಪಾಯಿಂಟ್ ಆಫ್ ಪಾರ್ಡರ್ ಎತ್ತಲಿಕ್ಕೆ ಅವಕಾಶ ಕೊಟ್ಟಿರಿ?

ಅಧ್ಯಕ್ಷರು.— ಅವರದು ಏನು ಪಾಯಿಂಟ್ ಆಫ್ ಆರ್ಡರ್ ಹೇಳಲಿ.

ಶ್ರೀ ಎಂ. ವೀರಪ್ಪ ಮೊಯಿಲಿ— ವ್ಯಾಕ್ಯೂಮ್‌ನಲ್ಲಿ ಪಾಯಿಂಟ್ ಆಫ್ ಆರ್ಡರ್ ಎತ್ತಲಿಕ್ಕೆ ಅವಕಾಶವಿಲ್ಲವೆಂದು ಅವರಿಗೆ ತಾವು ಹೇಳಬೇಕು.

(INTERRUPTIONS)

It should be governed by rules of this House. It cannot be governed by whims and fancies of any member.

(INTERRUPTIONS)

SRI. M. VEERAPPA MOILY— Point of order cannot be in vacum. Therefore, I request you to kindly give a ruling on it.

MR. SPEAKER— Your are questioning me. Vacum ವೇಳೆಯಲ್ಲಿ pointer of order ಎತ್ತಲಿಕ್ಕೆ I have not given any permission...

(ಗೊಂದಲ)

೧೨–೩೦ ಪಿ. ಎಂ.

ಅಧ್ಯಕ್ಷರು— ನೋಡಿ ಹೀಗೆ ಎಲ್ಲರೂ ಎದ್ದು ನಿಂತು ಮಾತನಾಡಿದರೆ ಹೇಗೆ? ನನಗೆ ಆ ಕಡೆಯು ವರೂ ಸಹಾಯ ಮಾಡಬೇಕು. ಈ ಕಡೆಯವರೂ ಸಹಾಯ ಮಾಡಬೇಕು. ಅವರಿನ್ನೂ ಪೂರ್ಣ ಮಾಡಿಲ್ಲ. ಏನು ಹೇಳುತ್ತಾರೆ ಎಂದು ಕೇಳೋಣ. ಈಗ ಕೆಲವರು ಹೇಳಿದ್ದೀರಿ. ಮಾನ್ಯ ಮಂತ್ರಿ ಗಳು ಏನು ಹೇಳುತ್ತಾರೆ, ಅದನ್ನೂ ಕೇಳುತ್ತೇನೆ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ— ಮಾನ್ಯ ಮೊಯಿಲಿಯವರು ವ್ಯಾಕ್ಯೂಮ್ ಇದ್ದಾಗ ಪಾಯಿಂಟ್ ಆಫ್ ಆರ್ಡರ್ ಎತ್ತಲಿಕ್ಕೆ ಬರುವುದಿಲ್ಲ ಎಂದು ಹೇಳಿದ್ದಾರೆ. ಇದರ ಬಗ್ಗೆ ವಿವಾದ ಇಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಈಗಾಗಲೇ ವಿಷಯವನ್ನು ಪ್ರಸ್ತಾಪ ಮಾಡಿ ಪ್ರಾಸ್ತಾವಿಕವಾ ದಂಥ ಮಾತುಗಳನ್ನು ಹೇಳತಕ್ಕ ಪ್ರಯತ್ನ ಮಾಡಿದ್ದಾರೆ. ಆದ್ದರಿಂದ ಇವತ್ತು ವ್ಯಾಕ್ಯೂಮ್ ಇಲ್ಲ. ಅವರು ಪ್ರಿವಿಲೇಜ್ ಮೋಷನ್ ಓದಿ ಹೇಳಿದ ಮೇಲೆ, ತಾವು ಈಗಾಗಲೇ ಅಷ್ಟನ್ನೇ ಕೊಡಿಸಿದ್ದಿರಿ. ಯಾರು ನೋಟೀಸ್ ಕೊಟ್ಟಿದ್ದಾರೆ, ಸಂಬಂಧಪಟ್ಟ ಮಂತ್ರಿಗಳು, ಸಚಿವರಿಗೆ ಮಾತ್ರ ಅವಕಾಶ ಕೊಡು ವುದಾಗಿ ನಿನ್ನೆ ರೂಲಿಂಗ್ ಕೊಟ್ಟಿದ್ದೀರಿ. ಆ ವಿಷಯದ ಮೇಲೆ ಚರ್ಚೆ ಮಾಡತಕ್ಕಂಥ ಅವಕಾಶ ಇಲ್ಲ, ಆದರೆ, ಪಾಯಿಂಟ್ ಆಫ್ ಆರ್ಡರ್ ಎತ್ತಿದರೆ ಅದು ರಿಲೆವೆಂಟ್ ಆಗಿ ಇದ್ದರೆ ಸರಿ. ಆಗ ಮಾತ್ರ ಪಾಯಿಂಟ್ ಆಫ್ ಆರ್ಡರ್ ಎತ್ತಬಹುದು.

ಶ್ರೀ ಕೆ. ಬಿ. ಕೋಳೀವಾಡ— ಮಾನ್ಯ ಅಧ್ಯಕ್ಷರೇ,

(ಗೊಂದಲ)

ಶ್ರೀ ಕೆ. ಬಿ. ಕೋಳಿವಾಡ— ಒಬ್ಬರಿಗೆ ಒಂದು, ಇನ್ನೊಬ್ಬರಿಗೆ ಇನ್ನೊಂದು ಮಾಡುವುದು ಬೇಡ.

ಅಧ್ಯಕ್ಷರು— ಶ್ರೀ ಕೋಳಿವಾಡರು ಏನು ಹೇಳುತ್ತಾರೋ ಕೇಳೋಣ. ಈಗಾಗಲೇ ಶ್ರೀ ಮೊಯಿಲಿಯವರು ಹೇಳಿದ್ದಾರೆ. ಶ್ರೀ ಬೊಮ್ಮಾಯಿಯವರು ಹೇಳಿದ್ದಾರೆ. ಅವರದ್ದೂ ಹೇಳಿ ಬಿಡಲಿ.

SRI. K. B. KOLIWAD— I would like to read the following. 'In our Assembly on 7th January 1969 after the question our declared as over, the hon. Member Sri. B. P. Gangadhar raised a point of order there upon the Hon'ble Speaker observed that no point of order can be raised during the interval between the termination of one tem and the commencement of the other item of business unless something has happened. Nothing has happened now and so the Member cannot raise any point of order'

Only the leader of the Opposition has just read and nothing has happened. Therefore, the honible Member has no right to raise the point of order.

ಶ್ರೀ ಎಂ. ವೀರಪ್ಪ ಮೊಯ್ಲಿ — ಸನ್ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ಏನು ಕಾರ್ಯಕಲಾಪಗಳು ನಡೆಯುತ್ತಿವೆ, ಇದರ ಬಗ್ಗೆ ತಾವು ಸ್ವಲ್ಪ ಆಲೋಚನೆ ಮಾಡಬೇಕು. ಏಕೆಂದರೆ, ಈಗ ಬಡ್ಜೆಟ್ ಅಧಿವೇಶನ ನಡೆಯುತ್ತಿದೆ. ಪ್ರಮುಖವಾದಂಥ ಬೇಡಿಕೆಗಳ ಬಗ್ಗೆ ಚರ್ಚೆ ನಡೆಯಬೇಕು. ಸರ್ಕಾರದ ಕಾರ್ಯಕಲಾಪಗಳು ನಡೆಯಬೇಕು. ನಿನ್ನೆ ಸಾಯಂಕಾಲ ವಿಚಾರದ ಪ್ರಸ್ತಾಪ ಇಲ್ಲಿ ಆಯಿತು. ಬಹುಶಃ ಹತ್ತು-ಹದಿನೈದು ನಿಮಿಷಗಳಲ್ಲಿ ಆಗತಕ್ಕದ್ದು ಮೂರು ಗಂಟೆ ಹಿಡಿಯಿತು. ಇವತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಎದ್ದು ನಿಂತು ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. He has read only the notice, Mere statement of notice cannot constitute a matter for point of order, because after all you have permitted him under rule 190. It is the question of procedure not the question of propriety. ಕಾನೂನಿಗೆ, ನಿಯಮಕ್ಕೆ ವಿರುದ್ಧವಾಗಿ ಅವರು ಎದ್ದು ನಿಂತಿಲ್ಲ. ಅವರ ವಿಚಾರದಲ್ಲಿ ಕಾನೂನಿಗೆ ವಿರುದ್ಧವಾಗಿ, ಅಥವಾ ನಿಯಮಕ್ಕೆ ವಿರುದ್ಧವಾಗಿ ಅವರು ಹೇಳಲಿಕ್ಕೆ ಪ್ರಯತ್ನ ಮಾಡಿದ್ದರೆ that is why I say, still it is in vacum. Nothing more he has said. ೧೯೦ನೇ ನಿಯಮಕ್ಕೆ ಅವರು ತಪ್ಪಿದ್ದಾರಾ? ಅವರು ಎಲ್ಲಿ ಎಡವಿದ್ದಾರೆ? ಏನು ಓದಬೇಕೋ ಅದನ್ನು ಮಾತ್ರ ಓದಿದ್ದಾರೆ. ಆದ್ದರಿಂದ ಅಧ್ಯಕ್ಷರೇ ಇವತ್ತು ಟ್ರೆಜರಿ ಬೆಂಚ್‌ನಲ್ಲಿ ಗವರ್ನ್‌ಮೆಂಟ್ ಬಿಸಿನೆಸ್ ಬೇಡ ಎನ್ನುವ ಭಾವನೆ ಇದ್ದರೆ ಸರಿ. ಈಗಾಗಲೇ ಬಾಟಲಿಂಗ್ ಹಗರಣದಲ್ಲಿ ಮುಖಕ್ಕೆ ಮಸಿ ಬಳಿದುಕೊಂಡು ಬಿಟ್ಟಿದ್ದಾರೆ.

(ಗೊಂದಲ)

SRI. M. VEERAPPA MOILY— If you are not interested in the Government business politically we are prepared to face.

ಶ್ರೀ ಎಸ್. ಆರ್. ಬೊಮ್ಮಾಯಿ— ಈ ಮನೆಯ ಕಾರ್ಯಕಲಾಪಗಳು ಕೆಲವು ದಿವಸಗಳಿಂದ ನಡೆಯುತ್ತಿವೆ, ಜನಜೀವನಕ್ಕೆ ಸಂಬಂಧಪಟ್ಟ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡತಕ್ಕಂಥ ವಿಚಾರದಲ್ಲಿ

ಯಾವ ರೀತಿ ನಡೆದುಕೊಂಡಿದ್ದಾರೆ ಎಂಬುದು ಜನತೆಗೆ ಗೊತ್ತಾಗಿದೆ. ಯಾರ ಮುಖಕ್ಕೆ ಮಸಿ ಬಳಿದಿದೆ ಎನ್ನುವುದು ಅವರಿಗೆ ಗೊತ್ತಾಗಿದೆ, ಅದು ಬೇರೆ ವಿಚಾರ.

(ಗೊಂದಲ)

(INTERRUPTIONS)

SRI. DHARAM SINGH— Where is the point of order now?

(INTERRUPTIONS)

ಶ್ರೀ ಎಸ್. ಆರ್. ಬೊಮ್ಮಾಯಿ— ಇವರ ಮುಖ ಎಷ್ಟು ಕಪ್ಪಾಗಿದೆ ಎಂದರೆ, ಮಸಿ ಬಳಿದರೇ ಮುಖವೇ ಕಾಣುವುದಿಲ್ಲ. ಇದು ಇವರ ನಡವಳಿಕೆಯಿಂದ ಗೊತ್ತಾಗಿದೆ. ಶ್ರೀ ಕೊಟ್ರಪ್ಪನವರ ಪಾಯಿಂಟ್ ಆಫ್ ಆರ್ಡರ್ ಏನು ಎಂಬುದು ಗೊತ್ತಿಲ್ಲ. ಸಂಬಂಧಿಸಿದ ವಿಷಯದ ಬಗ್ಗೆ, ಸಭೆಯ ಕಾನೂನಿನ ವ್ಯಾಪ್ತಿಯಲ್ಲಿ ಹೊರತಾಗಿದ್ದರೆ ತಾವು ಇದನ್ನು ತಳ್ಳಿಹಾಕಬಹುದು. ಆದರೆ ಅವರ ಪಾಯಿಂಟ್ ಆಫ್ ಆರ್ಡರ್ ಏನೆಂಬುದನ್ನು ಮೊದಲು ಕೇಳಬೇಕಾಗುತ್ತದೆ. ಇರ್ರೆಲವೆಂಟ್ ಆಗಿದ್ದರೆ ತಾವು ತಳ್ಳಿಹಾಕಬಹುದು. ತಮಗೆ ಆ ಅಧಿಕಾರ ಇದೆ: ಆದ್ದರಿಂದ ಈ ಹಕ್ಕುಚ್ಯುತಿ ನಿರ್ಣಯದ ಬಗ್ಗೆ ಅವರ ಪಾಯಿಂಟ್ ಆಫ್ ಆರ್ಡರ್ ಏನಿವೆಯೆಂಬುದನ್ನು ತಾವು ಕೇಳಬೇಕು. ನಂತರ ಬೇಕಾದರೆ ಅದನ್ನು ತಳ್ಳಿಹಾಕಬಹುದು.

ಶ್ರೀ ಆರ್, ವೆಂಕಟರಾಮಯ್ಯ— ೩೩೩ನೇ ನಿಯಮದಲ್ಲಿ ಈ ರೀತಿ ಹೇಳಿದೆ ... ಆದರೆ, ಒಂದು ಕ್ರಿಯಾಲೋಪವು ಸದನದ ಶಿಸ್ತುಪಾಲನೆಯನ್ನು ಮಾಡುವುದಕ್ಕಾಗಲಿ ಅಥವಾ ಸದನದ ಮುಂದೆ ಬಂದಿರುವ ಕಾರ್ಯಕಲಾಪಗಳನ್ನು ವ್ಯವಸ್ಥೆಗೊಳಿಸುವುದಕ್ಕಾಗಲಿ ಸಂಬಂಧಪಟ್ಟಿದ್ದರೆ, ಕಾರ್ಯಕಲಾಪಗಳ ಪೈಕಿ ಒಂದು ಬಾಬು ಮುಗಿದು ಇನ್ನೊಂದು ಬಾಬು ಪ್ರಾರಂಭವಾಗುವುದಕ್ಕೆ ಮುಂಚಿತವಾಗಿ ಬರುವ ಮಧ್ಯ ಕಾಲಾವಧಿಯಲ್ಲಿ ಒಬ್ಬರು ಸದಸ್ಯರು ಒಂದು ಕ್ರಿಯಾಲೋಪವನ್ನೆತ್ತುವುದಕ್ಕೆ ಅಧ್ಯಕ್ಷರು ಅನುಮತಿ ಕೊಡಬಹುದು.

ಈ ರೀತಿ ಇದರಲ್ಲಿ ತಮಗೆ ಅಧಿಕಾರವಿದ್ದರೂ ಸಹ ನಮ್ಮ ಸ್ನೇಹಿತರು ಅದಕ್ಕೆ ಆಕ್ಷೇಪ ಎತ್ತಿದ್ದಾರೆ. ಈ ಒಂದು ನಿಯಮದ ಪ್ರಕಾರ ವಿರೋಧ ಪಕ್ಷದ ನಾಯಕರಿಗೆ ವಿವರಣೆ ಕೊಡಲು ತಾವು ಅವಕಾಶ ಕೊಡಬಹುದು, ಮತ್ತೆ ಇದೇ ವಿಚಾರದಲ್ಲಿ ಕೌಲ್ ಅಂಡ್ ಶಕ್ದರ್ ಅವರ ಪುಸ್ತಕದಲ್ಲಿ ಏನು ಹೇಳಿದೆ ಎಂಬುದನ್ನು ಓದಿ ಹೇಳುತ್ತೇನೆ—

> ''where a contempt or a breach of privilege has been committed by a member of Parliament against a State Legislature or by a member of a State legislature against Parliament or Legislature of another State, a convention is being developed to the effect that when a question of breach of privliege is raised in any legislature in which a member of another legislature is involved, the presiding officer refers the case to the presiding officer of the legislature to which the member belongs and the latter deals with the matter in the same way as if it were a breach of privilege of that House, unless on hearing the member who raised the question or perusing any document, where the complaint is based on document, the presiding officer is satisfied that no breach of privilege has been committee or the matter is too trivial to be taken notice of, in which case he may disallow the motion for breach of privilege.

ಈ ರೀತಿ ಇಲ್ಲಿ ಹೇಳಿರುವುದರಿಂದ, ಇದರಲ್ಲಿ ಬ್ರೀಚ್ ಆಫ್ ಪ್ರಿವಿಲೇಜ್ ಇದೆಯೋ ಅಥವಾ ಇಲ್ಲವೆ ಎಂಬ ಬಗ್ಗೆ ತಾವು ರೂಲಿಂಗ್ ಕೊಡಬೇಕು.

ಅಧ್ಯಕ್ಷರು— ಇದಕ್ಕೆ ಅವಕಾಶ ಕೊಡಬೇಕೋ ಅಥವಾ ಬೇಡವೋ ಎಂಬ ಪ್ರಶ್ನೆ ನನ್ನ ಮುಂದಿದೆ ಈ ಬಗ್ಗೆ ನಾನು ಮಾನ್ಯ ಮೊಯ್ಲಿ ಅವರ ಅಭಿಪ್ರಾಯವನ್ನು ಮತ್ತು ಶ್ರೀ ಬೊಮ್ಮಾಯಿ ಅವರ ಅಭಿಪ್ರಾಯವನ್ನು ಕೇಳಿದ್ದೇನೆ. ಈ ಹಿಂದೆ ಮಾನ್ಯ ಮೊಯ್ಲಿ ಅವರು ಇಲ್ಲಿ ವಿರೋಧ ಪಕ್ಷದ ನಾಯಕ ರಾಗಿ ಮತ್ತು ಮಂತ್ರಿಗಳಾಗಿ ಕೆಲಸ ಮಾಡಿ ಹೆಚ್ಚಿನ ಅನುಭವವನ್ನು ಹೊಂದಿದ್ದಾರೆ. ಅದೇ ರೀತಿ ಶ್ರೀ ಬೊಮ್ಮಾಯಿ ಅವರೂ ಸಹ ಇಲ್ಲಿ ವಿರೋಧ ಪಕ್ಷದ ನಾಯಕರಾಗಿ ಮತ್ತು ಮಂತ್ರಿಗಳಾಗಿ ಕೆಲಸ ಮಾಡಿ ಹೆಚ್ಚಿನ ಅನುಭವವನ್ನು ಪಡೆದುಕೊಂಡಿದ್ದಾರೆ. ಈ ಕಾರಣದಿಂದ ಇವರಿಬ್ಬರ ಅಭಿಪ್ರಾಯ ಗಳನ್ನು ನಾನು ಕೇಳಿದ್ದೇನೆ. ಈ ಸಭೆಯ ನಿಯಮಾವಳಿಗಳಲ್ಲಿ ನೀವೆಲ್ಲರೂ ಸೇರಿ ನನಗೆ ಕೆಲವು ಅಧಿಕಾರ ಗಳನ್ನು ಕೊಟ್ಟಿದ್ದರೂ ಸಹ, ಆ ಅಧಿಕಾರಗಳನ್ನು ಚಲಾಯಿಸುವುದಕ್ಕೆ ಮೊದಲು ನಾನು ಇಲ್ಲಿ ಕೆಲವರ ಅಭಿಪ್ರಾಯಗಳನ್ನು ಪಡೆದುಕೊಳ್ಳಬೇಕಾಗುತ್ತದೆ. ಈಗ ಶ್ರೀ ಬೊಮ್ಮಾಯಿ ಅವರು ಏನು ಹೇಳಿ ದ್ದಾರೆಂದರೆ, ವಿರೋಧ ಪಕ್ಷದ ನಾಯಕರು ವಿಷಯವನ್ನು ಇನ್ನೂ ಪ್ರಾರಂಭ ಮಾಡದ ಕಾರಣ, ಈಗ ವ್ಯಾಕ್ಯೂಮ್ ಇದೆ, ಆದ್ದರಿಂದ ಈ ಹಂತದಲ್ಲಿ ಕ್ರಿಯಾಲೋಪ ಎತ್ತಲು ಬರುವುದಿಲ್ಲ ಎಂದು ಹೇಳಿ ದ್ದಾರೆ. ಆದರೆ ಮಾನ್ಯ ಮೊಯ್ಲಿ ಅವರು ವ್ಯಾಕ್ಯೂಮ್ ಪ್ರಶ್ನೆ ಇಲ್ಲಿ ಬರುವುದಿಲ್ಲ, ಏಕೆಂದರೆ, ವಿಷಯ ಈಗಾಗಲೇ ಸದನದ ಮುಂದಿದೆ, ವಿಷಯ ಏನಿದೆ ಎಂಬುದನ್ನು ಹೇಳಿರುವುದರಿಂದ ಈ ಹಂತದಲ್ಲಿ ಕ್ರಿಯಾಲೋಪವನ್ನೆತ್ತಲು ಅವಕಾಶ ಕೊಡಬಹುದೆಂದು ಹೇಳಿದ್ದಾರೆ. ಈಗ ನೋಟೀಸ್ ನಮ್ಮ ಮುಂದಿದೆ. ಆದ್ದರಿಂದ ಯಾರಾದರೂ ಇದರ ಮೇಲೆ ಪಾಯಿಂಟ್ ಆಫ್ ಆರ್ಡರ್ ಎತ್ತಿದರೆ, ಅದಕ್ಕೆ ನಾನು ಅವಕಾಶ ಕೊಡುತ್ತೇನೆ.

ಶ್ರೀ ಬಿ. ಜಿ. ಕೊಟ್ರಪ್ಪ— ಮಾನ್ಯ ಅಧ್ಯಕ್ಷರೇ, ನನ್ನ ಕ್ರಿಯಾಲೋಪ ಏನೆಂದರೆ, ನಿಯಮ ೧೯೦ರಲ್ಲಿ "ಸದಸ್ಯರು, ಅಧ್ಯಕ್ಷರ ಅನುಮತಿ ಪಡೆದು, ಸದಸ್ಯರ ಅಥವಾ ಸದನದ ಅಥವ ಸದನದ ಸಮಿ ತಿಯ ಹಕ್ಕುಚ್ಯುತಿ ಮೇಲೆ ಪ್ರಶ್ನೆಯನ್ನು ಹಾಕಬಹುದು" ಎಂದು ಹೇಳಿದೆ. ಆದರೆ ಇವರು ಕೊಟ್ಟಿರುವ ನೋಟೀಸ್‌ನಲ್ಲಿ ಈ ನಿಯಮದಲ್ಲಿ ಹೇಳಿರುವ ಪ್ರಕಾರ ಯಾವುದೇ ಸದಸ್ಯರನ್ನಾಗಲೀ, ಈ ಸದನವನ್ನಾ ಗಲೀ ಅಥವಾ ಯಾವುದೇ ಸದನದ ಸಮಿತಿಯನ್ನಾಗಲೀ ರೆಫರ್ ಮಾಡಿಲ್ಲ. ಈ ಕಾರಣದಿಂದ ಅವರು ಈ ವಿಷಯವನ್ನು ಈ ನಿಯಮದ ಕೆಳಗೆ ಇಲ್ಲಿ ಎತ್ತಲು ಬರುವುದಿಲ್ಲ. ಅವರು ವೈಯಕ್ತಿಕ ವಿವರಣೆ ಕೊಡುವುದಿದ್ದರೆ ನಿಯಮ ೩೧೫ರ ಕೆಳಗೆ ಕೊಡಬಹುದು. ಅವರು ಪೇಪರ್‌ನಲ್ಲಿ ಬಂದಿರುವಂತಹ ವಿಷಯವನ್ನು ಇಲ್ಲಿ ನಿಯಮ ೧೯೦ರ ಕೆಳಗೆ ಇಲ್ಲಿ ಪ್ರಸ್ತಾಪ ಮಾಡಲು ಬರುವುದಿಲ್ಲ. ಅವರು ತಮಗೆ ಕೊಟ್ಟಿರುವ ನೋಟೀಸ್ ಪ್ರಿವಿಲೇಜ್ ಮೋಷನ್‌ನಲ್ಲಿ ಬರುವುದಿಲ್ಲವಾದ ಕಾರಣ ಅದನ್ನು ರಿಜೆಕ್ಟ್ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಇದೇ ನನ್ನ ಕ್ರಿಯಾಲೋಪ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ನಿಯಮ ೧೯೦ರಲ್ಲಿ ಇದನ್ನು ಪ್ರಸ್ತಾಪ ಮಾಡಲು ಬರುವುದಿಲ್ಲ ಎಂದು ಕ್ರಿಯಾಲೋಪವನ್ನು ಎತ್ತಿದ್ದಾರೆ. That means it will give rise to another question That means the Hon'ble Speaker has given consent to raise the issue. There are two parts. Permission or consent is given under Rule 191. Then we have to go to yesterday's decision. The Speaker has no other option to decide the case but he has to refer straight way to the Privilege Committee. We are at that stage. Getting consent by the leader of the Opposition is already over. First part is over, Second part is that hehas to provided with an opportunity to make a brief statement about the privilege motion. ಸಂಕ್ಷಿಪ್ತವಾಗಿ ಸ್ಟೇಟ್‌ಮೆಂಟ್ ಮಾಡಲು ಮಾತ್ರ ಅಧಿಕಾರ ಇದೆ. ವಿವರಣೆ ಕೊಡಲು ಇದರಲ್ಲಿ ಅವಕಾಶವಿಲ್ಲ ಎಂದು ಹೇಳುವುದು ಸರಿಯಲ್ಲ. ಈ ಹಂತದಲ್ಲಿ ಅವರು ವಿವರಣೆ ಕೊಡುವುದು ತಡೆಯುವುದಕ್ಕಾಗುವುದಿಲ್ಲ. ಈ ವಿಚಾರದಲ್ಲ ಮಾನ್ಯ ಸದಸ್ಯರು ಎತ್ತಿರುವಂತಹ ಕ್ರಿಯಾಲೋಪವನ್ನು ತಾವು ಗಣನೆಗೆ ತೆಗೆದುಕೊಳ್ಳದೆ ಅವರು ಹೇಳಿಕೆ ನೀಡಲು ಅವಕಾಶ ಮಾಡಿಕೊಡಬೇಕು. ಸನ್ಮಾನ್ಯ ಅಧ್ಯಕ್ಷರೇ, ಫಸ್ಟ್ ಪಾರ್ಟ್, ತಾವು ಹೇಳಿಕೆಯನ್ನು ಓದಲಿಕ್ಕೆ ಅವಕಾಶವನ್ನು ಕೊಟ್ಟಿರಿ. ಹಾಗೆಯೇ ಬ್ರೀಫ್

ಸ್ಟೇಟ್‌ಮೆಂಟ್‌ನನ್ನು ಮಾಡಲಿಕ್ಕೆ ಅವಕಾಶ ಕೊಡಬೇಕು. We are just onthe threshold of Rule 194 The decision given by the Chair yesterday is still afresh in our minds. According to rule 194 the House willhave to consider the question and come to a decision or refer it to a Committee of Privileges on a motion made either by the member whohas raised the question of privileg eor by any other member. Thereis no otheroption ಮಾನ್ಯ ಸದಸ್ಯರು ಹೇಳಿದ್ದಕ್ಕೆ, ಇದನ್ನು ಪೂರಕವಾಗಿ ಹೇಳಿದ್ದೇನೆ, ಆದ್ದರಿಂದ ಇದು ಪಾಯಿಂಟ್ ಆಫ್ ಆರ್ಡರ್‌ಗೆ ಬರುವುದಿಲ್ಲ. ಏಕೆಂದರೆ ಯಾವ ರೂಲನ್ನು ಉಲ್ಲಂಘನೆ ನಾವು ಮಾಡಿಲ್ಲ. ರೂಲ್ಸ್ ಪ್ರಕಾರ ಓದಲಿಕ್ಕೆ ತಾವು ಅನುಮತಿ ಕೊಟ್ಟಿದ್ದೀರಿ. ಅದೇ ರೀತಿ ಬ್ರೀಫ್ ಸ್ಟೇಟ್‌ಮೆಂಟ್ ಮಾಡಲಿಕ್ಕೆ ಅವಕಾಶ ಕೊಡಬೇಕು. ಗೃಹ ಸಚಿವರ ಹೆಸರನ್ನು ಹೇಳಿ ಗೃಹ ಸಚಿವರ ಮೇಲೆ ಇದನ್ನು ಎತ್ತಿದ್ದಾಗಿದೆ ಅದು ಯಾವುದರ ಮೇಲೆ ಎಂದರೆ cause of action is a particular portion of the statement which was given in pursuance of the reply given to the debate. You cannot stop at this stage. He will have to be allowed to proceed.

SRI B. G. KOTRAPPA.—I rise to a point of order, Sir. The statement made by the Hon'ble Home Minister does not refer to any hon'ble member. It is a statement of Mr. Nandakumar who is no more.

SRI M. S. KRISHNAN –The hon'ble member has questioned the very basis of the notice. Whether it involves breach of previlage of the memberor of this House has to be decided by the Hon'ble Speaker and not byanyother member of this House. He has also raised it with your per-mission only.He is about to make a submission.Under Rule 193he has been given consent. That means there is substances in the breach of privilage notice. Under these circumstances nobody canh say that the hon'ble member cannot raise a breach of privilege by raising a point of order.

*(Interruption)*

SRI B. G. KOTRAPPA.—Sir, the proviso to Clause-193(1) reads thus :

> "Provided that where the Speaker has refused his consent under rule 190 or is of opinion that the matter proposed to be discussed is not in order, he may, if he thinks is necessary read the notice of question of privilege and state that he refuses consent or holds that the notice of question of privilege is not in order."

Even if the Speaker has to give consent to move a motion, if it is not in order, it can be refused. It is not the mandatory power that Speaker that must allow. If the matter proposed to be discussed is not in order, even at this stage it can be refused by the Speaker. That is all my point of order.

ಅಧ್ಯಕ್ಷರು.— ಬೊಮ್ಮಾಯಿಯವರೇ ನೀವು ಹೇಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರಾದ ಕೊಟ್ರಪ್ಪನವರು ಏನು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ, ಅದರಲ್ಲಿ ಈ ಮನೆಯ ಯಾವುದೇ ಸದಸ್ಯರ ಬಗ್ಗೆ ಗೃಹ ಮಂತ್ರಿಯವರು ಹೇಳಿಕೆಯನ್ನು ಓದಿಲ್ಲವಾದ್ದರಿಂದ ಇದು ಬ್ರೀಚ್ ಆಫ್ ಪ್ರಿವಿಲೇಜ್ ಆಗುವುದಿಲ್ಲವೆಂದು ಹೇಳಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಈಗಾಗಲೇ ತಾವು ಒಪ್ಪಿಗೆಯನ್ನು ಕೊಟ್ಟಿದ್ದೀರಿ, ಅದರಂತೆ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದರು. ಅವರು ಅದನ್ನು ಮುಂದುವರಿಸಬಹುದು ಎಂದು ನನ್ನ ಅಭಿಪ್ರಾಯ.

Sri S Bangarappa.--I must thank Sri Bommai for having agreed at least on this principal

Sri S R. Bommai.--All responsible things I will follow.

Sri S. Bangarappa,--It is a welcoming thing. ಮಾನ್ಯ ಸಭಾಧ್ಯಕ್ಷರೇ, ನಾನು ಈ ಒಂದು ಹಕ್ಕುಬಾಧ್ಯತೆ ನಿರ್ಣಯ ಮಂಡನೆ ಮಾಡುವುದಕ್ಕೆ ನಾನು ಮತ್ತು ನನ್ನ ಮಿತ್ರರು ಇದರ ಬಗ್ಗೆ ಹೇಳಿದ್ದೇವೆ. ಈ ಸದನದಲ್ಲಿ ಯಾವುದೇ ದಾಖಲೆ ಪತ್ರಗಳನ್ನು ಅಥವಾ ಹೇಳಿಕೆಗಳನ್ನು ಕೊಡಬೇಕಾದ ಸಂದರ್ಭದಲ್ಲಿ ಈ ಸದನಕ್ಕೆ ಮಾಹಿತಿಯನ್ನು ನೀಡಬೇಕಾಗುತ್ತದೆ. ಈ ಹೇಳಿಕೆಯು ಸತ್ಯವಾಗಿರಬೇಕು ಮತ್ತು ಸಮಂಜಸವಾಗಿರಬೇಕು. ಕಾನೂನು ಬಾಹಿರವಾಗಿ ಕೂಡ ಇರಬಾರದು, ಕ್ರಮಬದ್ಧವಾಗಿರಬೇಕು ಎನ್ನತಕ್ಕ ಪದಗಳನ್ನು ನಾವು ಉಪಯೋಗ ಮಾಡುತ್ತೇವೆ. ಇಲ್ಲೂ ಕೂಡ ನಾವು ಅದೇ ರೀತಿ ಉಪಯೋಗ ಮಾಡಿದ್ದೇವೆ. ಯಾವುದೇ ಒಬ್ಬ ಮಾನ್ಯ ಸದಸ್ಯರು ಈ ಸದನದಲ್ಲಿ ಮಾತನಾಡಬೇಕಾದರೆ ವಾಸ್ತವಾಂಶ ಇರಬೇಕಾಗುತ್ತದೆ. ಮಾತನಾಡುವ ಹಕ್ಕು ಸದಸ್ಯರಿಗೂ ಇರುತ್ತದೆ ಸರ್ಕಾರಕ್ಕೂ ಇರುತ್ತದೆ. ನಾನು ಇಲ್ಲ ಎಂದು ಹೇಳುವುದಿಲ್ಲ. ಆದರೆ ಸತ್ಯಕ್ಕೆ ದೂರವಾದ ವಿಚಾರವನ್ನು ಯಾರಾದರು ಹೇಳತಕ್ಕಂತಹ ಸಂದರ್ಭದಲ್ಲಿ ಬಹಳ ಎಚ್ಚರಿಕೆಯನ್ನು ವಹಿಸಬೇಕಾಗುತ್ತದೆ. ಕಾನೂನು ಬದ್ಧವಾಗಿ ನಮ್ಮ ನಿಯಮಾವಳಿ ಪ್ರಕಾರ ನಿರ್ಭೀತಿಯಿಂದ ಹೆದರಿಕೆ ಬೆದರಿಕೆ ಇಲ್ಲದಂತೆ ರಾಜ್ಯದ ಜನತೆಯ ಹಿತದೃಷ್ಟಿಯಿಂದ ನಾವು ವಾಸ್ತವಾಂಶವನ್ನು ಹೇಳುತ್ತೇವೆ. ಯಾವುದೇ ಪಕ್ಷದ ಸದಸ್ಯರಾದರು ಅವರು ಇದೇ ರೀತಿ ಮಾಡಬೇಕಾಗುತ್ತದೆ. ಸದಸ್ಯರುಗಳು ತಮ್ಮ ಕರ್ತವ್ಯವನ್ನು ನಿರ್ವಹಣೆ ಮಾಡತಕ್ಕ ಸಂದರ್ಭದಲ್ಲಿ ಎಲ್ಲಿ ನಾವು ತಪ್ಪು ಮಾಡುತ್ತೇವೆಯೋ ಎನ್ನುವ ಭಾವನೆ ಕೂಡ ಇರಬೇಕು. ಯಾರೇ ತಪ್ಪಿ ಮಾತನಾಡಬಾರದು. ನಾನು ಇರಬಹುದು, ಬೇರೆ ಯಾರೇ ಇರಬಹುದು. ಬೊಮ್ಮಾಯಿಯವರು ಇರಬಹುದು, ದೇವೇಗೌಡರು ಇರಬಹುದು. ಮಾನ್ಯ ಮುಖ್ಯ ಮಂತ್ರಿಯವರು ವಿರೋಧಪಕ್ಷದ ನಾಯಕರಾಗಿ ವಿಧಾನ ಪರಿಷತ್ತಿನಲ್ಲಿ ಈ ಹಿಂದೆ ಇದ್ದರು.

೧–೦೦ ಪಿ.ಎಂ.

ನಾವು ಸುಮಾರಾಗಿ, ಕಾನೂನು ಬಾಹಿರವಾಗಿ ಅಸತ್ಯ ವಿಚಾರಗಳನ್ನು ಇಲ್ಲಿ ಹೇಳುತ್ತಾ ಹೋದರೆ. ನಾಳೆ ಸಾರ್ವಜನಿಕರಲ್ಲಿ ಒಂದು ಭಾವನೆ ಮೂಡಿ ಬರುತ್ತದೆ. ಏನು ಅಂದರೆ ಇಲ್ಲಿಯೇ ಸಾಕಷ್ಟು ತಪ್ಪುಗಳು ನಡೆಯುತ್ತಿವೆ ಎಂದು ಅವರು ಭಾವಿಸಲು ಅವಕಾಶವಾಗುತ್ತದೆ. ಆ ದೃಷ್ಟಿಯಲ್ಲಿ ಒಂದು ಸದ್ಭಾವನೆಯನ್ನು ಇಟ್ಟುಕೊಂಡು ನಾವು ಇಲ್ಲಿ ರಾಜಕಾರಣ ಮಾಡುತ್ತಾ ಬಂದಿದ್ದೇವೆ ಯಾವುದೇ ರಾಜಕೀಯ ಪಕ್ಷಗಳು ಇದ್ದರೂ ಕೂಡಾ, ಹಾಗೆಯೇ ವ್ಯಕ್ತಿಗಳು ಯಾರೇ ಇರಬಹುದು, ಸಮಾಜದಲ್ಲಿ ಇರತಕ್ಕಂತಹ ಸಮಾಜಘಾತುಕ ವ್ಯಕ್ತಿಗಳು ಇರಬಹುದು, ಕ್ರಿಮಿನಲ್ ವ್ಯಕ್ತಿಗಳೇ ಇರಬಹುದು. ಕಳ್ಳತನ ಮಾಡಿರುವವರೇ ಇರಬಹುದು, ಅಸತ್ಯವನ್ನು ಹೇಳಿ ಜೀವನವನ್ನು ಮಾಡತಕ್ಕಂತಹವರು ಇರಬಹುದು, ಪ್ರಜಾಸಪ್ರಭುತ್ವದ ನೀತಿಗೆ ವಿರುದ್ಧವಾಗಿರತಕ್ಕಂತಹ ಜನ ಇರಬಹುದು, ಯಾರ ಬಗ್ಗೆ ಮಾತನಾಡ ಬೇಕಾದರೂ ಒಂದು ಸೀಮಿತವಾದ, ಆಯಾಯ ಸಂದರ್ಭಕ್ಕೆ ಅನುಗುಣವಾಗಿ ಮಾತನಾಡಬೇಕಾಗುತ್ತದೆ, ನಾನು ನೋಡಿರತಕ್ಕಂತಾದ್ದು, ೧೯೬೭ರಿಂದ ನೋಡುತ್ತಾ ಬಂದಿದ್ದೇನೆ, ಅವರೂ ಕೂಡ ಅನೇಕ ವರ್ಷಗಳಿಂದ ರಾಜಕೀಯದಲ್ಲಿ ಅನುಭವಸ್ಥರು ಆಗಿದ್ದಾರೆ. ಅವರು ಕೂಡ ಈ ಮನೆಯ ಸದಸ್ಯರಾಗಿ ತಮ್ಮ ಸೇವೆಯನ್ನು ಸಲ್ಲಿಸಿದವರಾಗಿದ್ದಾರೆ. ಆದರೆ ಯಾರಾದರೂ ಇಲ್ಲಿ ಒಂದು ಮಾತನ್ನು ಆಡಿದರೆ ಅದನ್ನು ರಾಜಕೀಯ ದುರುದ್ದೇಶ ಇಲ್ಲದ ರೀತಿಯಲ್ಲಿ ಇರತಕ್ಕಂತಹ ಮೂಲಭೂತ ವಿಚಾರವನ್ನು ಪರಿಗಣನೆಗೆ ತೆಗೆದುಕೊಳ್ಳ ಬೇಕಾಗುತ್ತದೆ. ವಿಚಾರವನ್ನು ಹೇಳ

ತಕ್ಕಂತಹ ವ್ಯಕ್ತಿ ಸರಕಾರದವರಾಗಿರಬಹುದು, ಸಂಭಂದಪಟ್ಟವರ ಘನತೆಗೌರವಗಳಿಗೆ ಕುಂದುಬಾರದ ರೀತಿಯಲ್ಲಿ ಅವರು ವಿಚಾರವನ್ನು ಇಡಬೇಕಾಗುತ್ತದೆ. ವ್ಯಕ್ತಿಯ ಮೇಲೆ ಮಾಡತಕ್ಕಂತಹ ಕೆಲವು ವಿಚಾರಗಳು ಆ ಸಂಬಂಧಪಟ್ಟ ವ್ಯಕ್ತಿಯ ವ್ಯಕ್ತಿತ್ವಕ್ಕೆ ಕುಂದು ಬರತಕ್ಕಂತಾ ಸಂದರ್ಭವೂ ಬರುತ್ತದೆ. ಇದರ ಪರಿಣಾಮವಾಗಿ ಏನು ಗಂಭೀರತೆ ಈ ವಿಷಯದ ಬಗ್ಗೆ ಇದೆ ಎನ್ನುವುದಕ್ಕಾಗಿ ನಾವು ಈಗ ಚರ್ಚೆಯನ್ನು ಇಡಬೇಕಾಗುತ್ತದೆ. ಯಾವುದೇ ವ್ಯಕ್ತಿಯ ಮೇಲೆ ಆಡತಕ್ಕಂತಹ ಮಾತು ಬಹಳ ಸುಲಭ ಆದರೆ ಆ ಮಾತುಗಳಿಂದ ಜಾರಿಕೊಳ್ಳುವುದು ಸ್ವಲ್ಪ ಕಷ್ಟವಾಗುತ್ತದೆ. ಈ ಸದನದಲ್ಲಿ ನಾವು ಆಡತಕ್ಕಂತಹ ಮಾತುಗಳು, ಇಡೀ ಕರ್ನಾಟಕದ ಜನತೆಗೆ, ಅವರ ಮಡಿಲಿಗೆ ಹೋಗಿ ತಲುಪುತ್ತವೆ. ಇಂತಹ ಮಾತುಗಳನ್ನು ಇಲ್ಲಿ ಹೇಳುವುದಕ್ಕೆ ಸಾರ್ವಜನಿಕರಿಂದ ಒಪ್ಪಿಗೆಯು ಬಂದಿದೆಯೋ ಎಂದು ನಾವು ಇಲ್ಲಿ ಜ್ಞಾಪಕದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಸದನಕ್ಕೆ, ನಮಗೆ ಇಲ್ಲಿ ಮಾತನಾಡಲು ಅಧಿಕಾರ ಇದೆ, ಆದರೆ ವ್ಯಾಪ್ತಿಯಲ್ಲಿದ್ದರೂ ಕೂಡಾ ನಾವು ಪ್ರಜಾಪ್ರಭುತ್ವದಚೌಕಟ್ಟಿನಲ್ಲಿ ನಾವು ಇಲ್ಲಿ ಕೆಲಸ ಮಾಡಬೇಕಾಗುತ್ತದೆ ನಮ್ಮ ಕುರಿತಾಗಿ ಇಲ್ಲಿ ಚರ್ಚೆ ಮಾಡಬೇಕಾದರೆ ಮಾತನಾಡತಕ್ಕಂತಹ ದಾಟಿಯಲ್ಲಿ ವ್ಯತ್ಯಾಸ ಇರಬಹುದು ವಿಷಯದ ಬಗ್ಗೆ ಕೆಲವೊಮ್ಮೆ ಹೆಚ್ಚು ಮಾತನಾಡಿದ್ದಾರೋ ಕಮ್ಮಿ ಮಾತನಾಡಿದ್ದಾರೋ ಎನ್ನುವ ಭಾವನೆ ಬಂದರೂ ಕೂಡಾ, ಅಂತಹ ವಿಚಾರವನ್ನು ಪ್ರಸ್ತಾಪ ಮಾಡಿದರೆ, ಪ್ರಸ್ತಾಪ ಮಾಡಿದವರೇ ಅದರ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ. ಇಲ್ಲದಿದ್ದರೆ ವಿಷಯವು ತನ್ನ ಸ್ವರೂಪವನ್ನು ಬದಲಾವಣೆ ಮಾಡಿಕೊಳ್ಳುತ್ತದೆ. ಅದು ಬೇರೆ ರೂಪವನ್ನು ತಾಳುತ್ತದೆ ಎಂಬುದನ್ನು ತಿಳಿದುಕೊಳ್ಳಬೇಕಾಗುತ್ತದೆ. ಹಾಗೆಯೇ ಮತ್ತೊಬ್ಬರ ಬಗ್ಗೆ ಹೀಗೆ ಮಾತನಾಡಿದ್ದಕ್ಕೆ ವ್ಯಥೆ ಪಡಬೇಕಾದ ಸಂದರ್ಭವೂ ಬರುತ್ತದೆ. ನಾನು ೧೯೭೭ರಿಂದ ಶಾಸನಸಭಾ ಸದಸ್ಯನಾಗಿ ಇದ್ದೇನೆ. ಇಲ್ಲಿ ಇದುವರೆಗೆ ಅಂತಹ ಒಂದು ಮಾತನ್ನೂ ಕೂಡಾ ನಾನು ಆಡಿಲ್ಲ. ಸದನದಲ್ಲಿ ಮತ್ತು ಹೊರಗಡೆ ಒಂದು ಚೌಕಟ್ಟಿನಲ್ಲಿ ಆರೋಪ ಪ್ರತ್ಯಾರೋಪಗಳು ನಡೆಯುತ್ತವೆ. ಆದರೆ ಅಂತಹವುಗಳನ್ನು ಒಂದು ಸೂಕ್ತವಾದ ರೀತಿಯಲ್ಲಿ ಮಾಡಿಕೊಂಡು ಹೋಗತಕ್ಕಂತ ವಿಚಾರ ಮಾಡುತ್ತೇವೆ. ವಿಷಯವನ್ನು ನಿರೂಪಣೆ ಮಾಡುವಾಗ ಮತ್ತು ವಿಷಯದ ಘನತೆ ಬಗ್ಗೆ, ವಿಷಯವನ್ನು ಪ್ರಸ್ತಾಪ ಮಾಡುವಾಗ ಗಮನವನ್ನು ಕೊಟ್ಟುಕೊಂಡು ಬಂದಿದ್ದೇವೆ. ಆದರೆ ಯಾರೊಬ್ಬರ ಚಾರಿತ್ರ್ಯವಧೆ ಮಾಡತಕ್ಕಂತಹ ಒಂದು ಕೆಲಸಕ್ಕೆ ಕೈಹಾಕಿಲ್ಲ. ಆದರೆ ನಮ್ಮ ಬಗ್ಗೆ ಯಾರಾದರೂ ಹಾಗೆ ಮಾಡಿದರೆ ನಾವು ಕೂಡಾ ಅದರ ಬಗ್ಗೆ ಗಮನ ಕೊಡಬೇಕಾಗುತ್ತದೆ. ಆದರೆ ಈಗ ಇಲ್ಲಿ, ಸ್ಪಷ್ಟವಾಗಿ ಇರತಕ್ಕಂತಹ ಅಸತ್ಯ ಮತ್ತು ಕಾನೂನು ಬಾಹಿರವಾಗಿರತಕ್ಕಂತಹ ವಿಚಾರಗಳ ಪ್ರಸ್ತಾಪ ಆಗುವಾಗ ಸಹಜವಾಗಿ ಇಲ್ಲಿ ಚಾರಿತ್ರ್ಯವಧೆಗೆ, ಅದರಲ್ಲೂ ನನ್ನ ಚಾರಿತ್ರ್ಯವಧೆಗೆ ಸ್ಪಷ್ಟವಾಗಿ ಕೈಹಾಕಿರತಕ್ಕಂತಹ ಒಂದು ಪ್ರಾಮಾಣಿಕ ಪ್ರಯತ್ನವನ್ನು ಮಾನ್ಯ ಗೃಹಸಚಿವರು ಕೊಟ್ಟ ಹೇಳಿಕೆಯಲ್ಲಿ ಅಡಗಿದೆ ಎಂದು ಹೇಳಬಹುದು.

ಈ ಕುರಿತು ಬೇರೆ ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕಿಂತ ಮೊದಲು, ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತೇನೆ.

I am quoting from page 222 of the Parctice and Procdure of Parliament, by Kaul and Shakdher :

"Presenting False, Forged or Fabricated Documents to the House or its Committees :

It is a breach of privilege and contempt of the House to present false, forged or fabricated documents to either House or to a Committee thereof with a view to deceive them. The necessity of preventing the production before the House of false or fabricated documents was emphasised by Speaker Mavalanker in the Sinha Case when he stated in Loka Sabha.

"...It is necessary, in the first instance, to examine the genuineness or otherwise of the documents laid on the Table

of the House by Dr. Sinha. Such an examination is necssary to prevent the production before the House of any documents which are not genuine or fabricated, and to see that no member misleads intentionally or unintentionally...."

There should be an intention on the part of the Hon'ble Home Minister. I don't think that he had an intention. Even if we come to the opinion that he made the statement unintentionally,

"...and to see that no member misleads intentionally or unintentionally any section of the House by referring to or placing on the Table of House documents which are not genuine and are ultimately found to be forged or fabricated."

Now I quote from Page 223.

"Speeches and writings reflecting on the House or its committeess or members are punished by the House as a contempt on the principle that such acts," tend to obstruct Houses in the performance of their functions by diminishing the respect due to them." The House may punish not only contempts arising out of facts of which the ordinary courts will take cognizance, but those of which they cannot."

The important sentence is ;

"The House may punish not only contempts arising out of facts which the ordinary courts will take cognizance, but those of which they cannot."

I continue further ;

"Thus a lebel on a member of Parliment may amount to a breach of privilege without being a libel under the civil or criminal law.

In order to constitute a breach of privilege, however, a libel upon a member of Parliament must concern his character or conduct in his capacity as a member of the House and must be based on matters arising in the actual transaction of the business of the House."

I further quote from Page 224.

"Similarly, the House may not necessarily take serious notice of defamatory statements made by irresponsible persons."

It if not the case here. The Hon'ble Home Minister is a responsible person.

"In deciding such case of libel, it is recognised that the extent and circumstances of the publication of a libellous statement as also the standing of the person making such a statement should be taken into account in considering whether privilege should be asserted in a particular case."

Thereafter, speeches and writings which have been held to constitute breach of privilege and contempt of the House have been categorised.

ನಾನು ಏತಕ್ಕೆ ಈ ಒಂದು ಕೌಲ್ ಅ್ಯಂಡ್ ಶಕ್ಧರ್ ಪುಸ್ತಕದ ವ್ಯಾಖ್ಯಾನ ಓದಿದೆ ಎಂದರೆ ಒಂದೇ ಒಂದು ಕಾರಣಕ್ಕಾಗಿ. ನಾವು ನಮ್ಮ ಕರ್ತವ್ಯಗಳನ್ನು ಈ ಸದನದಲ್ಲಿ ಮಾಡಬೇಕಾಗುತ್ತದೆ. ನಮ್ಮ ಕರ್ತವ್ಯವನ್ನು ನಾವು ಮಾಡತಕ್ಕಂಥ ಸಂದರ್ಭದಲ್ಲಿ ನಿರ್ಭೀತಿಯಿಂದ ನಿರ್ವಹಿಸಬೇಕಾಗುತ್ತದೆ ಆ ರೀತಿ ನಾವು ಕೆಲಸ ಮಾಡುವಾಗ ಯಾವ ವಿಚಾರವನ್ನು ಪ್ರತಿಪಾದನೆ ಮಾಡುತ್ತೇವೆಯೋ ಅದು ಈ ಸದನದ ನಿಯಮಗಳ ಚೌಕಟ್ಟಿನೊಳಗೆ ಮತ್ತು ಕಾನೂನಿನ ಚೌಕಟ್ಟಿನೊಳಗೆ ಕೂಡ ಇರುತ್ತದೆ. We have got our own separate judiciary. It is one of the wings of the administration in our Country.

ಅಲ್ಲೂ ಕೂಡ ಕಾನೂನು ಚೌಕಟ್ಟಿನೊಳಗೆ ಬರುವಂತಹ ವಿಚಾರಗಳು ಇರುತ್ತವೆ. ಮಾನ್ಯ ಅಧ್ಯಕ್ಷರೇ ಇಲ್ಲಿರತಕ್ಕಂಥ ಪ್ರಶ್ನೆ ಒಬ್ಬ ಮಾನ್ಯ ಸದಸ್ಯರ ಹಕ್ಕಿಗೆ ಚ್ಯುತಿ ಬಂದಿರತಕ್ಕಂಥ ಸಂದರ್ಭದಲ್ಲಿ ನಾವು ನಮ್ಮ ಕರ್ತವ್ಯವನ್ನು ನಿರ್ಭೀತಿಯಿಂದ ಮಾಡತಕ್ಕಂಥ ಸಂದರ್ಭಕ್ಕೆ ಅಡ್ಡ ಬರುವಂತಹ ವಿಚಾರಗಳು ಇದ್ದರೆ ಯಾವ ಒಬ್ಬ ವ್ಯಕ್ತಿಯೇ ಆಗಲಿ ಇಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಎನ್ನತಕ್ಕಂಥ ಮಾತನ್ನು ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಇಲ್ಲಿ ಆ ಹೇಳಿಕೆಯನ್ನು ಕೊಡುವಾಗ ನಾನು ಸದನದಲ್ಲಿ ಇರಲಿಲ್ಲ ಎನ್ನತಕ್ಕಂಥ ಮಾತನ್ನು ತಾವೂ ಕೂಡ ಹೇಳಿದ್ದೀರಿ. ನಾನು ಸುಮಾರು ಮೂರು ದಿವಸಗಳ ಕಾಲ ಸದನದಲ್ಲಿ ಇರಲಿಲ್ಲ. ನಾನು ಈ ಸದನದಲ್ಲಿ ಇಲ್ಲದಿದ್ದಾಗ ಅವರು ಆ ಹೇಳಿಕೆಯನ್ನು ಕೊಟ್ಟಿದ್ದಾರೆ. ಆ ಬಗ್ಗೆ ನಾನು ರಿಪ್ಲೈ ಕೊಡಬೇಕೆಂದು ತಮ್ಮನ್ನು ಡಿಮ್ಯಾಂಡ್ ಮಾಡಿದಾಗ ತಾವು ಹೇಳಿದ್ದೀರಿ. ನಾನು ಅವಕಾಶ ಮಾಡಿಕೊಡುತ್ತೇನೆ ಎಂದು. ಇದು ಸ್ಪಷ್ಟವಾಗಿದೆ. ಆಗ ತಾವೇ ಹೇಳಿದ್ದೀರಿ. ಇವತ್ತು ಸಾಧ್ಯವಾಗದಿದ್ದರು ಸಹ ಇನ್ನೊಂದು ದಿವಸ ಅವಕಾಶ ಮಾಡಿಕೊಡುವುದಾಗಿ ತಿಳಿಸಿದ್ದೀರಿ. ಅವರು ಈ ಹೇಳಿಕೆಯನ್ನು ಮಾಡಿರುವುದು ಒಂದೇ ಒಂದು ಉದ್ದೇಶದಿಂದ ಅದೇನೆಂದರೆ ಒಬ್ಬ ವ್ಯಕ್ತಿ ಹೇಳಿದ ಎಂದು. ಆದರೆ ಆ ವ್ಯಕ್ತಿ ಇವತ್ತು ನಮ್ಮ ಮುಂದೆ ಇಲ್ಲ. ಆ ವ್ಯಕ್ತಿ ಖೂನಿಯಾಗಿ ಹೋಗಿದ್ದಾನೆ. ಅದಕ್ಕೆ ಸಂಬಂಧಪಟ್ಟ ಕೆಲವರನ್ನು ತಾವು ಈಗಾಗಲೇ ಅರೆಸ್ಟ್ ಮಾಡಿದ್ದೀರಿ. ನಿಮ್ಮ ಅಧಿಕಾರಿಗಳು ಕೊಟ್ಟ ಅಭಿಪ್ರಾಯವನ್ನು ಸದನದಲ್ಲಿಯೂ ಹೇಳಿದ್ದೀರಿ ಎನ್ನುವುದು ನನ್ನ ನೆನಪು. ಆ ಬಗ್ಗೆ ತಾವು ಇನ್ನೂ ಇನ್‌ವೆಸ್ಟಿಗೇಷನ್ ಮಾಡುತ್ತಿದ್ದೀರಿ, ನಾನು ಈ ವಿಚಾರದಲ್ಲಿ ಒಂದೇ ಒಂದು ಮಾತನ್ನು ಹೇಳುವುದಾದರೆ ತಾವು ಕೊಟ್ಟಿರತಕ್ಕಂಥ ಹೇಳಿಕೆಯನ್ನು ನಾನು ಸಂಪೂರ್ಣವಾಗಿ ಓದಿದ್ದೇನೆ. ಆ ಹೇಳಿಕೆಯನ್ನು ನಾನು ಸಂಪೂರ್ಣವಾಗಿ ನಿರಾಕರಿಸುತ್ತೇನೆ. ಅದಕ್ಕೂ ನನಗೂ ಯಾವುದೇ ರೀತಿಯ ಸಂಪರ್ಕ ಇಲ್ಲವೆಂದು ನಾನು ಮತ್ತೊಮ್ಮೆ ಸ್ಪಷ್ಟವಾಗಿ ಹೇಳುತ್ತೇನೆ. ಆ ಹೇಳಿಕೆ ಏನು ಇದೆ ಅದರ ಪ್ರೊಸೀಡಿಂಗ್ಸ್ ಕಾಪಿ ನನ್ನಲ್ಲಿ ಸಹ ಇದೆ. ಅದರಲ್ಲಿ ಏನು ಇದೆ ಎಂದರೆ ಯಾರೋ ಒಬ್ಬ ಸುಂದರಂ ನಾಯುಡ್ರವರಿಗೆ ನಾನು ಹೇಳಿದೆ ನಮ್ಮ ಪಕ್ಷದ ಅಧ್ಯಕ್ಷರಾದ ಶ್ರೀ ಕೆ.ಹೆಚ್. ರಂಗನಾಥ್‌ರವರು ಬೇರೆ ಯಾರೂ ಅಲ್ಲ, ಅವರು ನಮ್ಮ ಪಕ್ಷದ ಅಧ್ಯಕ್ಷರು. ಅವರು ಸಹ ನಮ್ಮ ಪಕ್ಷದವರೇ. ಆ ರೀತಿ ಇದ್ದರೂ ಸಹ ನಾವು ಅವರ ಮೇಲೆ ಗಲಾಟೆ ಮಾಡಿಸುವ ಅವಶ್ಯಕತೆ ಏತಕ್ಕೆ ಬರುತ್ತದೆ. ಅಂತಹವರ ಮೇಲೆ ಹಲ್ಲೆ ಮಾಡು ಎಂದು ನಾನು ಹೇಳಿಕೊಟ್ಟು ಗುಂಡೂರಾವ್‌ಗೆ ಜಿಂದಾಬಾದ್ ಎಂದು ಕೂಗಿ ಎಂದು ಹೇಳಿದೆ ಎಂದು ತಮ್ಮ ಸ್ಟೇಟ್‌ಮೆಂಟ್‌ನಲ್ಲಿ ಇದೆ. ಈ ಎರಡು ಮಾತುಗಳನ್ನು ಬಿಟ್ಟು ಬೇರೆ ಏನೂ ಇಲ್ಲ. Whatever that may be, even according to the Evidence Act it is highly inadmissible because it is hearsay evidence. ಕೋರ್ಟ್‌ನಲ್ಲಿ ಮತ್ತು ಈ ಸದನದಲ್ಲಿ ಕೂಡ ಅದು ಎವಿಡೆನ್ಸ್ ಆಗುವುದಿಲ್ಲ.......

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ ನನ್ನದೊಂದು ಕ್ರಿಯಾಲೋಪ ಇದೆ. ಈಗ ಈ ಸಭೆಯ ಮುಂದೆ ಇರತಕ್ಕಂಥ ವಿಷಯು ಎಂದರೆ ಮಾನ್ಯ ಗೃಹ ಸಚಿವರಿಂದ ಸದಸ್ಯರ ಹಕ್ಕು ಚ್ಯುತಿಯಾಗಿದೆ, ಈ ಸದನದ ಹಕ್ಕು ಚ್ಯುತಿಯಾಗಿದೆ ಎಂಬುದು ಇದನ್ನು ಅವರ ನೋಟೀಸ್‌ನಲ್ಲಿ ಕೊಟ್ಟಿದ್ದಾರೆ. ಆದರೆ ಈಗ ಅವರ ಹೇಳಿಕೆ ಯಾವ ರೀತಿಯಲ್ಲಿ ಇದೆ ಎಂದರೆ ಹಕ್ಕುಚ್ಯುತಿಗೆ ಸಂಬಂಧವಿಲ್ಲದೆ ಅವರು ಅವರ ಸ್ವಂತ ಹೇಳಿಕೆಯನ್ನು ಕೊಡುವುದಕ್ಕೆ ಹೊರಟದ್ದಾರೆ. ಆದ್ದರಿಂದ ತಾವು ಅದಕ್ಕೆ ಅವಕಾಶ ಕೊಡಬಾರದು. ಅವರು ಆ ಅವಕಾಶವನ್ನು ಬೇರೆ ಸಂದರ್ಭದಲ್ಲಿ ತಾವು ಅವಕಾಶ ಕೊಟ್ಟರೆ ಉಪಯೋಗಿಸಿಕೊಳ್ಳಲಿ. ಈಗ ಸದಸ್ಯರ ಹಕ್ಕುಚ್ಯುತಿಯಾಗಿದೆ ಎಂದು ನೋಟೀಸ್ ತಂದಿದ್ದಾರೆ, ಆ ಬಗ್ಗೆ ಪ್ರಸ್ತಾಪ ಮಾಡಲಿ. ಅದು ಬಿಟ್ಟು ಬೇರೆ ವಿಷಯಗಳನ್ನು ಇಲ್ಲಿ ತರುವುದಕ್ಕೆ ಅವಕಾಶ ಮಾಡಿಕೊಡಬಾರದು ಎಂದು ನಾನು ಕೇಳಿಕೊಳ್ಳುತ್ತೇನೆ. ಇದೇ ನನ್ನ ಕ್ರಿಯಾಲೋಪ.

ಅಧ್ಯಕ್ಷರು.—ತಾವು ಕಳುಹಿಸಿಕೊಟ್ಟಿರುವ ನೋಟೀಸ್‌ಗೆ ಸಂಬಂಧಪಟ್ಟಂತೆ ಪ್ರಸ್ತಾಪ ಮಾಡಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ ಇಲ್ಲಿ ಹೇಳತಕ್ಕಂಥ ವಿಚಾರಗಳು ಅದಕ್ಕೆ ಅವಶ್ಯಕತೆ ಇದೆ ಎಂದು ನಾನು ಭಾವಿಸಿಕೊಳ್ಳುತ್ತೇನೆ. ಇದನ್ನು ತಾವೂ ಸಹ ಒಪ್ಪಿಕೊಳ್ಳಬಹುದು. ಮಾನ್ಯ ಗೃಹ ಸಚಿವರು ಈ ಸದನದಲ್ಲಿ ಕೊಟ್ಟಿರತಕ್ಕಂಥ ಹೇಳಿಕೆ ಅಸತ್ಯವಾದುದು, ಮತ್ತು ಕಾನೂನಿ ಬಾಹಿರವಾದುದು, ಈ ಮಾತನ್ನು ಹೇಳುವಾಗ ಅದು ಪ್ರಿವಿಲೇಜ್ ಆಗಿ ತೆಗೆದುಕೊಳ್ಳುವುದಕ್ಕೆ ಬರುತ್ತದೆ. That is the basis on which we have filed this motion for your kind consideration. Hope that the Hon. Minister will also agree with this view.

ಮಾನ್ಯ ಅಧ್ಯಕ್ಷರೇ ನಾನು ನನ್ನ ಸ್ವಂತ ಹೇಳಿಕೆಯನ್ನು ಕೊಡುವುದಕ್ಕೆ ಎಲ್ಲಾ ವಿವರಗಳು ಇವೆ. ಅದಕ್ಕೆ ತಾವು ನಿಯಮ ೩೧೦ ಪ್ರಕಾರ ಅವಕಾಶ ಮಾಡಿಕೊಟ್ಟಿದ್ದೀರಿ, ಆ ಬಗ್ಗೆ ತುಂಬಾ ವಿವರಗಳು ನನ್ನ ಬಳಿ ಇವೆ. ಆದರೆ ಆ ಎಲ್ಲಾ ವಿವರಗಳಿಗೆ ಈಗ ನಾನು ಹೋಗುವುದಿಲ್ಲ. ಈ ಸಂದರ್ಭ ಬಂದಾಗ ನಾನು ಹೇಳುತ್ತೇನೆ. ನಾವು ನಮ್ಮ ಪ್ರಿವಿಲೇಜ್ ಮೋಷನ್‌ನಲ್ಲಿಯೇ ಹೇಳಿದ್ದೇವೆ. ಇದು ಕಾನೂನು ಬಾಹಿರ, ಮತ್ತು ಅಸತ್ಯವಾದಂಥ ಹೇಳಿಕೆ ಎಂದು. ತಾವು ಕ್ರಿಮಿನಲ್ ಪ್ರೊಸೀಜರ ಕೋಡ್ ಸೆಕ್ಷನ್ ೧೬೨ ಅನ್ನು ನೋಡಿ. ಆ ಪ್ರಕಾರ ಒಬ್ಬ ವ್ಯಕ್ತಿಯು ಹೇಳಿಕೆಯನ್ನು ಯಾವ ರೀತಿ ರೆಕಾಡ್ ಮಾಡ ಬೇಕೆನ್ನುವುದು ತಮಗೂ ಸಹ ಗೊತ್ತಿದೆ, ಮಾನ್ಯ ಕಾನೂನು ಮಂತ್ರಿಗಳೂ ಸಹ ಒಳ್ಳೆಯ ವಕೀಲ ರಾಗಿದ್ದವರು ಅವರು ಎಷ್ಟೋ ಕ್ರಿಮಿನಲ್ ಕೇಸ್‌ಗಳನ್ನು ಹ್ಯಾಂಡಲ್ ಮಾಡಿದ್ದಾರೆ. ನಾನೂ ಸಹ ವಕೀಲನಾಗಿದ್ದವನು. ನನಗೂ ಸಹ ಗೊತ್ತಿದೆ ಆದರೆ ಅದೇ ಒಬ್ಬ ಅಪರಾಧಿಯು ಸ್ಟೇಟ್‌ಮೆಂಟ್ ತೆಗೆದು ಕೊಳ್ಳಬೇಕಾದರೆ. Supposing that statement is made before the Magistrate, it amounts to judicial confession. ಆ ಹೇಳಿಕೆಯನ್ನು ಪೋಲೀಸ್ ಆಫೀಸರ್ಸ್ ತಮಗೆ ಕೊಟ್ಟಿದ್ದಾರೆ. That becomes an extra-judicial confession.

ಅದು ತಮಗೆಲ್ಲರಿಗೂ ಗೊತ್ತಿರತಕ್ಕಂಥ ವಿಚಾರ. ನಾನು ಸಹ ಅಡ್ವೊಕೇಟ್ ಆಗಿ ಕೆಲಸ ಮಾಡಿದ್ದೇನೆ. ಇದು ಮತ್ತೊಂದು ರೀತಿಯಲ್ಲಿ ಕನ್‌ಫೆಕ್ಷನ್ ಕೂಡಆಗಿರುವುದರಿಂದ ಸುಪ್ರೀಂಕೋರ್ಟ್‌ನಲ್ಲಿ ಎಷ್ಟೋ ಜಡ್ಜ್‌ಮೆಂಟ್‌ಗಳಲ್ಲಿ ಪೋಲೀಸ್ ಆಫೀಸರ್ಸ್ ರೆಕಾರ್ಡ್ ಅನ್ನು ಅಕ್ಸೆಪ್ಟ್ ಮಾಡಿಲ್ಲ. Any statement made before a Police Officer is highly inadmissible in evidence. ಈ ಸಂದರ್ಭದಲ್ಲಿ ತಾವು ಏನು ಒಂದು ಹೇಳಿಕೆಯನ್ನು ಮಾಡಿದ್ದೀರಿ ಆ ಹೇಳಿಕೆ ಖೂನಿ ಯಾಗಿರುವ ನಂದಕುಮಾರ್‌ರವರು ಆಸ್ಪತ್ರೆಯಲ್ಲಿದ್ದಾಗ ಪೋಲೀಸ್ ಆಫೀಸರ್ಸ್ ತೆಗೆದುಕೊಂಡಿರುವ ಹೇಳಿಕೆ. It is not at all signed even by the deceased Nandakumar.

ಅದಕ್ಕೆ ಅವರು ರುಜು ಸಹ ಇಲ್ಲ. ಆದ್ದರಿಂದ ಅದು ರೆಕಾರ್ಡ್ ಆಗುವುದಿಲ್ಲ. ಆ ಹೇಳಿಕೆಯನ್ನು ರೇಕಾರ್ಡ್ ಮಾಡಿರುವವರು ಶ್ರೀಪರಮೇಶ್ವರಪ್ಪ ಎನ್ನುವವರು. Therefore, it is a statement made before a Police Officer which can never be admitted in evidence.

ಆ ಪ್ರಕಾರವಾಗಿ ಕೋರ್ಟ್‌ನಲ್ಲಿ ಕೂಡ ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ. ಈ ಸದನದಲ್ಲಿ ಕೂಡ ಅದನ್ನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಎನ್ನತಕ್ಕಂಥ ಮಾತನ್ನು ನಾನು ತಮ್ಮ

ಗಮನಕ್ಕೆ ತರಬಯಸುತ್ತೇನೆ. ಮಾನ್ಯ ಅಧ್ಯಕ್ಷರೇ ಆ ಬಗ್ಗೆ ಬೇಕಾದಷ್ಟು ರೂಲಿಂಗ್ಸ್ ಇವೆ, ಮತ್ತು ಬೇಕಾದಷ್ಟು ಜಡ್ಜ್‌ಮೆಂಟ್ಸ್ ಸಹ ಇವೆ. ಆದರೆ ಅವುಗಳೆಲ್ಲವನ್ನು ಈಗ ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಅವರು ಏನು ಒಂದು ಹೇಳಿಕೆ ಮಾಡಿದ್ದಾರೋ ಆ ಹೇಳಿಕೆಗೆ again this piece of matter cannot be admitted in evidence.

ಈ ಸಂದರ್ಭದಲ್ಲಿ ಆ ಹೇಳಿಕೆಗೆ ಒಂದು ಐದು ಪೈಸೆ ಬೆಲೆ ಕೂಡ ಇಲ್ಲ. ಕಾನೂನು ಪ್ರಕಾರ ಬೆಲೆ ಇಲ್ಲ. ಕಾನೂನನ್ನು ಯಾರು ಮಾನ್ಯತೆ ಮಾಡುತ್ತಾರೋ ಅವರ ರೀತ್ಯ ಈ ಹೇಳಿಕೆಗೆ ಬೆಲೆ ಇಲ್ಲ. ಆ ಒಂದು ಸಂದರ್ಭ ಬಂದಾಗ ಎಲ್ಲಾ ವಿಚಾರಗಳನ್ನು ಹೇಳುತ್ತೇನೆ. ನಾನು ನಮ್ಮ ಪಕ್ಷದ ಅಧ್ಯಕ್ಷರ ಮೇಲೆ ಹಲ್ಲೆ ಮಾಡಿಸುವಂತಹ ಒಂದು ಕೀಳು ಮಟ್ಟಕ್ಕೆ ಹೋಗುವುದಿಲ್ಲ.

ತಾವು ಅಧ್ಯಕ್ಷರು ಇದ್ದೀರಿ, ತಮಗೂ ಅನೇಕ ವಿಚಾರಗಳು ಗೊತ್ತಿವೆ. ಯಾವುದೇ ರಾಜಕೀಯ ಪಕ್ಷ, ಮತ್ತೊಂದು ಪಕ್ಷಕ್ಕೆ ಹೊಡೆದಿರುವುದನ್ನು ನಾನು ಕಂಡಿಲ್ಲ. ಯಾವುದೇ ರಾಜಕೀಯ ಪಕ್ಷದ ಒಬ್ಬ ವ್ಯಕ್ತಿ ಇಂತಹ ಕೆಲಸಕ್ಕೆ ಕೈ ಹಾಕಿರುವುದನ್ನು ನಾನು ನೋಡಿಲ್ಲ. ಇತ್ತೀಚಿನ ಆಡಳಿತವನ್ನು ರೆಕಾರ್ಡ್ ಮಾಡಿರುವುದು, ಓದುವುದು, ಇಂತಹ ವಿಚಾರಧಾರೆಗಳನ್ನು ನೋಡಿದರೆ, ಆ ಒಂದು ಬೆಳವಣಿಗೆ ಪ್ರಯತ್ನ ಇವರಿಂದ ಪ್ರಾರಂಭವಾಗಬಹುದೆಂದು ನಮ್ಮ ಅಭಿಪ್ರಾಯ ನಮಗೆ ಇದು ಅನುಮಾನ ಬರತಕ್ಕ ವಿಚಾರ ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ನನ್ನ ರಾಜಕೀಯ ಜೀವನದಲ್ಲಿ ಯಾರೊಬ್ಬರ ಕ್ರಿಮಿನಲ್ ಸಂಪರ್ಕವನ್ನೂ ನಾನು ಇಟ್ಟುಕೊಂಡಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಪೋಲೀಸರ ಮುಂದೆ ಹೇಳಿಗತಕ್ಕ ಹೇಳಿಕೆಗೆ ಸಹಿ ಮಾಡಿಲ್ಲ. ಪೋಲೀಸರ ಮುಂದೆ ಹೇಳತಕ್ಕಂಥ ಅಪರಾಧಿ ಹೇಳಿಕೆ ಕಾನೂನು ಪ್ರಕಾರ ಬೆಲೆ ಬರುವುದಿಲ್ಲ ಎನ್ನುವುದು ಎಲ್ಲರಿಗೂ ಗೊತ್ತಿರತಕ್ಕ ವಿಚಾರ. ಆದರೆ ಈ ಸಭೆಯಲ್ಲಿ ಅದನ್ನು ಸರಿ ಅಥವಾ ತಪ್ಪು ಎಂದು ತೀರ್ಮಾನ ಮಾಡುವಂಥ ಅಧಿಕಾರ ನಮಗೂ ಇಲ್ಲ. ಇದನ್ನು ಎಲ್ಲರೂ ಒಪ್ಪಿಕೊಳ್ಳುತ್ತೀರಿ ಮತ್ತೆ ಮಾನ್ಯ ಬಂಗಾರಪ್ಪನವರೂ ಕೂಡ ಒಪ್ಪಿಕೊಳ್ಳುತ್ತಾರೆ. ನನ್ನ ಆತಂಕ ಏನೆಂದರೆ, ಈ ಹೇಳಿಕೆ ಹೊರಗಡೆ ಹೇಳಬಹುದು, ಅದು ಅವರಿಗೆ ಬಿಟ್ಟ ವಿಚಾರ. ಕ್ರಿಮಿನಲ್ ಪ್ರೊಸೀಜರ್ ಕೋಡ್ ೧೬೨ರ ಪ್ರಕಾರ, ಪೋಲೀಸರು ಕೊಟ್ಟಿರುವ ಹೇಳಿಕೆ ಹಕ್ಕುಚ್ಯುತಿ ತರುತ್ತದೆ ಸದನದ ಸದಸ್ಯರಿಗೆ, ಈ ಸಭೆಗೆ ಹಕ್ಕುಚ್ಯುತಿ ತರುತ್ತದೆ ಎಂಬುದು ಅವರ ಮನಸ್ಸಿನಲ್ಲಿದ್ದರೆ ಅದಕ್ಕೆ ಮಾತ್ರ ಸೀಮಿತವಾಗಿರಬೇಕೆಂದು ನನ್ನ ಅಭಿಪ್ರಾಯ ತಾವು ಇದನ್ನು ಎತ್ತಿ ಹಿಡಿಯಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನರೇ, ಸಾಕಷ್ಟು ವಿಚಾರ ಹೇಳಿದ್ದೀರಿ, You please conclude.

(ಮಾನ್ಯ ಗೃಹ ಸಚಿವರು, ಭಾವಚಿತ್ರ ಇರತಕ್ಕ ಪತ್ರಿಕೆಯನ್ನು ತೋರಿಸಿದರು)

ಶ್ರೀ ಎಸ್. ಬಂಗಾರಪ್ಪ.—ನಿಮ್ಮ ಬತ್ತಳಿಕೆಯಲ್ಲಿ ಏನೇನು ಬಾಣಗಳು ಇವೆ ಎಂಬುದು ನನಗೆ ಗೊತ್ತಿದೆ.

MR. SPEAKER.—You have sufficiently explained.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ನಾನು ಏತಕ್ಕೆ ಈ ವಿಚಾರ ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ಅವರು ಹೇಳಿಗತಕ್ಕಂಥ ಹೇಳಿಕೆ ಸದನದ ಸ್ವತ್ತಾಗಿದೆ. copy of the statement made by the Hon. Home Minister ನನ್ನ ಹತ್ತಿರ ಕೂಡ ಇವೆ. ಇದು ಅಸತ್ಯ, ಕಾನೂನು ಬಾಹಿರ ಎನ್ನುವ ಉದ್ದೇಶದಿಂದ ಪ್ರಶ್ನೆಯನ್ನು ಎತ್ತಿದ್ದೇನೆ. ಅವರು ಹೇಳದೇ ಹೋಗಿದ್ದರೆ, ನಾನು ಈ ಪ್ರಶ್ನೆಯನ್ನು ಎತ್ತುವ ಅಗತ್ಯ ಇರಲಿಲ್ಲ, ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಗುಂಡೂರಾವ್ ಅವರೂ ನಮ್ಮ ಪಕ್ಷದವರು, ಮಾನ್ಯ ಕೆ. ಹೆಚ್. ರಂಗನಾಥ್‌ರವರು ಕೂಡ ನಮ್ಮ ಪಕ್ಷದ ಅಧ್ಯಕ್ಷರು. ನಾನು ಅವರ ಬಗ್ಗೆಯೂ ಗೌರವ ಇಟ್ಟುಕೊಂಡಿದ್ದೇನೆ. ಇವರ ಪಕ್ಷದ ಬಗ್ಗೆಯೂ ಗೌರವ ಇಟ್ಟುಕೊಂಡಿದ್ದೇನೆ ಆದರೆ ಮೂಲಭೂತವಾಗಿ ನಮ್ಮ ನಮ್ಮಲ್ಲಿ ಒಡಕು ಬರಬೇಕೆಂಬ ಉದ್ದೇಶದಿಂದ ಸ್ಪಷ್ಟವಾದ ಪ್ರಕಾರ ಮಾಡಿರತಕ್ಕಂಥಾದ್ದು. Concocted document ಎಂದು ನಾನು ಸ್ಪಷ್ಟವಾಗಿ ಈ ಮಾತನ್ನು ಹೇಳುತ್ತೇನೆ. ಮಾನ್ಯ ಸಭಾಧ್ಯಕ್ಷರೇ, ನಾನು ತಮ್ಮ ಗಮನಕ್ಕೆ ಒಂದು ವಿಚಾರವನ್ನು ಈ ಸಂದರ್ಭದಲ್ಲಿ ತರಬೇಕಾಗಿದೆ. ಇಲ್ಲಿ ಫೋಟೋ ಮತ್ತೊಂದು ವಿಚಾರವನ್ನು ಪದೇ ಪದೇ ನಾನು

ಕಂಡಿದ್ದೇನೆ. ನಾನು ರಾಜಕಾರಣ ಮಾಡುವುದಕ್ಕೆ ಪಬ್ಲಿಕ್‌ನಲ್ಲಿ ಹೋಗುತ್ತೇನೆ. ಜನ ಜೈಕಾರ ಹಾಕುತ್ತಾರೆ ಆ ಫೋಟೋಗಳು ನಮ್ಮ ಹತ್ತಿರವೂ ಇವೆ, ನಾನು ತೋರಿಸುತ್ತೇನೆ. ಅದನ್ನು ಪ್ರೊಡ್ಯೂಸ್ ಮಾಡಬೇಕೆಂಬ ಉದ್ದೇಶ ನಮಗೆ ಇಲ್ಲ.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೆ, ಸಂದರ್ಭ ಬಂದಾಗ ಏನೇನು ಇಟ್ಟುಕೊಂಡಿದ್ದಾರೆ ಅವೆಲ್ಲವನ್ನೂ ಪ್ರಡ್ಯೂಸ್ ಮಾಡಲಿ ಇಲ್ಲದಿದ್ದರೆ ಈಗಲೇ ಮಾಡಲಿ.

ಶ್ರೀ ಎಸ್. ಬಂಗಾರಪ್ಪ.—ಸಂದರ್ಭ ಬಂದಾಗ ಎನ್ನುವ ಮಾತನ್ನು ಅವರು ಆಡಿದ್ದಾರೆ. ಅದು ಟೇಪ್ಸ್ ಇರಬಹುದು, ಫೋಟೋ ಇರಬಹುದು, ನಿಮ್ಮ ಬತ್ತಳಿಕೆಯಲ್ಲಿ ಇರುವ ಬಾಣಗಳನ್ನು ನೀವು ಬಿಚ್ಚಿ, ನಮ್ಮ ಹತ್ತಿರ ಇರತಕ್ಕವುಗಳನ್ನು ನಾವು ಬಿಚ್ಚುತ್ತೇವೆ. ಈ ಸಂದರ್ಭದಲ್ಲಿ ಫೋಟೋಗಳೊಳಗೆ ಯಾರು ? ಏನು ? ಎನ್ನುವುದು ಗೊತ್ತಾಗುವುದಿಲ್ಲ. ಅದರಲ್ಲಿ ಯಾರು ಎನ್ನುವುದು ಗೊತ್ತಿಲ್ಲ. ನನ್ನ ಮನಸ್ಸಿಗೆ ಎಷ್ಟು ವ್ಯಥೆಯಾಗುತ್ತದೆ ದರೆ...

ಶ್ರೀ ಎ. ಲಕ್ಷ್ಮೀಸಾಗರ್.—ನಮ ನೋವು ಆದರೂ ಸಂತೋಷ, ಆದರೆ ನಿಮಗೆ ನೋವು ಆಗಬಾರದು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ಈ ಸಂದರ್ಭದಲ್ಲಿ ನಾನು ಯಾವುದೇ ಕ್ರಿಮಿನಲ್ ಅಥವಾ ಮತ್ತೊಂದು ಸಂಪರ್ಕ ಇಟ್ಟುಕೊಂಡಿಲ್ಲ, ಇಟ್ಟುಕೊಳ್ಳುವುದಕ್ಕೆ ಸಂಬಂಧವೂ ಇಲ್ಲ, ಅವಶ್ಯಕತೆಯೂ ಇಲ್ಲ. ನಾನು ನೀತಿ ನಿಯಮಬದ್ಧವಾಗಿ ರಾಜಕಾರಣ ಮಾಡಿದ್ದೇನೆ. ಒಬ್ಬರು ಸಬ್ ಇನ್‌ಸ್ಪೆಕ್ಟರ್ ಇದ್ದರು, ಅವರು ನಮ್ಮ ಜನರನ್ನು ಹೊಡೆಸಿದ್ದರು....

ಅಧ್ಯಕ್ಷರು.—ಪ್ರಿವಿಲೇಜ್ ಮೋಷನ್ ಬಗ್ಗೆ ಹೇಳಿ. don't deviate.

SRI RAMESH KUMAR.—Sir, I am on a point of order.

SRI A. LAKSHMISAGAR.—I ask the pardon of the Hon. Leader of Opposition for interrupting him. The question of privilege is very much narrowed down. According to the notice read by the Leader of Opposition, it says that the statement made by the Hon, Home Minister on the 1st of March 1986 amounts to commission of breach of privilege of this House. That is what is stated here "Sri B. Rachaiah, Minister for Home, while replying to the discussion on demands of Home Department has committed breach of Privilege of this House by producing..." He is entitled to comment upon it and show to you prima facie that the statements made by the Hon.Home Minister amount to commission of breach of privilege of this House. He cannot bring in the question of sub-Inspector and his acts of omissions and commissions. We are not doubting his genuiness. We are not doubting his character. The Government also does not doubt its bonafide. But the fact of the matter is Whether the statement made by the Hon. Home Minister amounts to a breach of privilege. It is therefore narrowed down to a small area and he must stick to that and anything said beyond that will be extraneous and not germane to the point under discussion. Therfore, I submit that this is a valid point of order and you will kindly uphold it

MR. SPEAKER.—I entirely agree with you Hon. Member Sri Bangarappa, please conclude. You have sufficiently explained.

ಶ್ರೀ ಎಸ್. ಬಂಗಾರಪ್ಪ.—ಮಾನ್ಯಸಭಾಧ್ಯಕ್ಷರೇ, ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ಇವರ ಒಂದು ಹೇಳಿಕೆ ಏನಿದೆ, ಅತ ಸಾಯುವುದಕ್ಕೆ ಮೊದಲೇ ಕೊಟ್ಟಿದ್ದರೆ ನಾನು ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದೆ. ಅವರು ಇದನ್ನು ಸ್ವತಃ ಮಾಡಲಿಲ್ಲ, ಸತ್ತಿರತಕ್ಕಂಥ ಒಬ್ಬ ವ್ಯಕ್ತಿಯ ಹೇಳಿಕೆ ಇದು. ಇವೆಲ್ಲವೂ ಕನ್‌ಕಾಕ್ಟೆಡ್, ಫ್ಯಾಬ್ರಿಕೇಟೆಡ್. ನಮ್ಮ ಹೆಸರನ್ನು ಕೆಡಿಸಬೇಕೆಂಬ ಉದ್ದೇಶದಿಂದ ಇದನ್ನು ತಂದಿದ್ದಾರೆಂದು ಗೊತ್ತಾಗುತ್ತದೆ. ಈ ಸಂದರ್ಭದಲ್ಲಿ ತಮ್ಮ ಅವಗಾಹನೆಗೆ ತರುವುದು ಇಷ್ಟೆ.

೧-೩೦ ಪಿ.ಎಂ.

ಏತಕ್ಕೆ ಅವರು ಈ ರೀತಿ ಓದಿದ್ದಾರೆ ಎನ್ನತಕ್ಕದ್ದು ಬಹಳ ಮುಖ್ಯವಾದುದು. ಅವರು ಏತಕ್ಕೆ ಅದನ್ನು ಓದಿದರು ಎಂದರೆ ಸುಮಾರಾಗಿ ಇವರ ಆಡಳಿತದಲ್ಲಿ ಡಕಾಯಿಟ್ಸ್ ಇರಬಹುದು. ರಾಜ್ಯದಲ್ಲಿ ಬರಗಾಲ ಇರಬಹುದು, ಜನರ ಭಾವನೆಗಳನ್ನು ಡೈವರ್ಟ್ ಮಾಡಬೇಕು. ಅದಕ್ಕೋಸ್ಕರವಾಗಿ ನಾನು ಈ ವಿಚಾರ ಹೇಳುತ್ತಾ ಇರುವುದು.

SRI M. RAGHUPATHY.—Sir, I am on a Point of Order...

(Interruption)

ಅಧ್ಯಕ್ಷರು.—ಈಗ ನೀವು ಈ ವಿಷಯವನ್ನು ಡೀವಿಯೇಟ್ ಮಾಡುವುದಕ್ಕೆ ಹೋಗಬೇಡಿ. ಈ ವಿಚಾರದಲ್ಲಿ ತಾವು ಸಫಿಷಿಯೆಂಟ್ ಆಗಿ ಹೇಳಿದ್ದೀರಿ. ಎವಿಡೆನ್ಸ್ ಕೂಡ ಸಾಕಷ್ಟು ಹೇಳಿದ್ದೀರಿ.

ಶ್ರೀ ಎಸ್. ಬಂಗಾರಪ್ಪ.—ಅದು ಜನರಲ್ ಆಯಿತು. ಇನ್ನೂ ಇದೆ. ಬೇಗನೆ ಕನ್‌ಕ್ಲೂಡ್ ಮಾಡಿ.

ಶ್ರೀ ಎಸ್. ಬಂಗಾರಪ್ಪ.—ನನ್ನ ಮೇಲೆ ಇವರು ಏತಕ್ಕೆ ಹೀಗೆ ಮಾಡುತ್ತಾರೆ ಎನ್ನುವುದನ್ನೂ ಕೂಡ ನಾನು ಈ ಸದನದಲ್ಲಿ ಹಿಂದೆ ಹೇಳಿದ್ದೇನೆ, ಈಗಲೂ ಹೇಳುತ್ತೇನೆ.

ಅಧ್ಯಕ್ಷರು.—ಅದಕ್ಕೆ ಈಗ ಅವಕಾಶ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ರೆಕ್ಟಿಫೈಡ್ ಸ್ಪಿರಿಟ್ ಬಗ್ಗೆ ಅರ್ರ್ಯಾಕ್ ಬಾಟ್ಲಿಂಗ್ ಬಗ್ಗೆ............

(ಗೊಂದಲ)

ಅಧ್ಯಕ್ಷರು.—ವಿಷಯಕ್ಕೆ ಬನ್ನಿ......

ಶ್ರೀ ಎಸ್. ಬಂಗಾರಪ್ಪ.—ಶ್ರೀಮಾನ್ ರಾಚಯ್ಯನವರು ನನಗೆ ಬೆದರಿಕೆ ಪತ್ರ ಬಂದಿದೆ ಎಂದು ಹೇಳತಕ್ಕಂಥಾದ್ದನ್ನೂ ನಾನು ನೋಡಿದ್ದೇನೆ.

ಶ್ರೀ ಜೆ.ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೇ, ಈ ಚರ್ಚೆ ಸಾರ್ಥಕವಾಗುವುದಕ್ಕೆ ನಾನು ಒಂದು ಸಲಹೆ ಕೊಡುತ್ತೇನೆ. ಈಗ ಕಾನೂನು ಮಂತ್ರಿಗಳು ಇದರ ಬಗ್ಗೆ ಯೋಗ್ಯ ನಿರ್ಣಯ ಹೇಳಿದರು. ಇದನ್ನು ಟೆಕ್ನಿಕಲ್ ಆಗಿ ಹೇಳುವುದಕ್ಕೆ ಬರುವುದಿಲ್ಲ ಅಂತ ಹೇಳುತ್ತಿದ್ದಾರೆ. ಮಾನ್ಯ ಗೃಹಮಂತ್ರಿಗಳು ಈ ಸದನದಲ್ಲಿ ಮಂಡಿಸಿದ ಪರವಾಗಿ, ಇದರ ಬಗ್ಗೆ ಮಾನ್ಯ ವಿರೋಧಪಕ್ಷದ ನಾಯಕರಿಗೆ ಅವರ ವ್ಯಕ್ತಿತ್ವಕ್ಕೆ ಏನಾದರೂ ಧಕ್ಕೆಯಾಗಿದ್ದರೆ ಆ ವಿಷಯವನ್ನು ಪ್ರಸ್ತಾಪ ಮಾಡಬಹುದು. ಅದು ಬಿಟ್ಟು ಬೇರೆ ರೀತಿಯಲ್ಲಿ ಹೋಗಿ ಇದು ಹಕ್ಕು ಚ್ಯುತಿ ನಿರ್ಣಯ ಎಂದರೆ ಆ ಹೇಳಿಕೆ ಇದರಲ್ಲಿ ಉದ್ಭವಿಸುವುದಿಲ್ಲ. ಈವಾಗ ಇಲ್ಲಿ ಸಿಚ್ಯುಯೇಷನ್ ಏನು ಇದೆ, ಅದರ ವಿವರಗಳಿಗೆ ಈಗ ಹೋಗುವುದು ಸರಿಯಲ್ಲ. ಈ ಹೇಳಿಕೆ ಕೊಟ್ಟಿರುವುದರ ಬಗ್ಗೆ ಪ್ರಧಾನವಾಗಿ ಕಾನೂನು ಮಂತ್ರಿಗಳು ಏನು ಹೇಳಿದ್ದಾರೆ ಅದು ಸರಿಯಾಗಿದೆ. ಹಾಗಿರುವಾಗ ಅವರು ಓದಿದ್ದು ಹೇಗೆ ಪ್ರಿವಿಲೇಜ್ ಆಗುತ್ತದೆ? ಇದು ಗಂಭೀರವಾದಂಥಾ ವಿಚಾರ. ಇವರ ಸತ್ಯಾಸತ್ಯತೆಯ ಬಗ್ಗೆ ಚರ್ಚೆ ಮಾಡುವುದಕ್ಕೆ ಬೇರೆ ಮಾರ್ಗ ಇದೆ ರೂಲು ೩೦೧ ಇದೆ. ಅದನ್ನು ಯಾರೂ ಅಲ್ಲಗಳೆಯುವುದಕ್ಕಾಗುವುದಿಲ್ಲ. ಅದು ಬಿಟ್ಟು ಪ್ರಿವಿಲೇಜ್ ಹೆಡ್ಡಿಂಗ್‌ನಲ್ಲಿ ಬೇಡ. ಅವರು ಅದಕ್ಕೆ ಮತ್ತೆ ಎಕ್ಸ್‌ಪ್ಲನೇಷನ್ಸ್ ಕೊಡುವ ಸಂಪ್ರದಾಯ ಸರಿ ಹೋಗುವುದಿಲ್ಲ. ತಮಗೆ ಒಂದು ಉದಾಹರಣೆ ಹೇಳುತ್ತೇನೆ, ಹೌಸ್ ಆಫ್ ಕಾಮನ್ಸ್‌ನಲ್ಲಿ ಒಬ್ಬ ಸದಸ್ಯರು

ಇನ್ನೊಬ್ಬ ಸದಸ್ಯರನ್ನು Bastard ಎಂದು ಕರೆದ Bastard ಎಂದು ಕರೆದ ತಕ್ಷಣ Bastard is such an unparliamentary word. ಅದಕ್ಕೆ ಏನು ಮಾಡಿದರು ಅಧ್ಯಕ್ಷರು Bastard ಅನ್ನುವ ಪದ ಉಪಯೋಗಿಸಿದ ಸದಸ್ಯರು If I prove that he is Bastard ಆಗ ಆ ಅಧ್ಯಕ್ಷರು ಏನು ಹೇಳಿದರು. You prove ಎಂದು ಹೇಳಿದರು. ಆಗ ಸದಸ್ಯರು ಬಾಸ್ಟರ್ಡ್ ಅನ್ನುವುದನ್ನು ಪ್ರೂವ್ ಮಾಡಿದರು This is History, This is a document ಆದುದರಿಂದ ಮಾನ್ಯ ಗೃಹ ಸಚಿವರು ಒಂದು ಹೇಳಿಕೆ ಕೊಟ್ಟಿದ್ದಾರೆ. ಆ ಹೇಳಿಕೆಯಿಂದ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಅವರ ಮನಸ್ಸಿನಲ್ಲಿ ಇವರು ಏನು ಹೇಳಿದ್ದಾರೆ, ಏನು ಪರಿಣಾಮವಾಗಿದೆ, ಅದನ್ನು ಅವರು ಪ್ರೂವ್ ಮಾಡದಿದ್ದರೆ ಅದು ಪ್ರಿವಿಲೇಜ್ ಆಗುತ್ತದೆ. ಮಾನ್ಯ ಗೃಹಸಚಿವರು ನಂದಕುಮಾರ್ ಕೊಟ್ಟಂಥಾ ಹೇಳಿಕೆಯನ್ನು ಅವರು ಓದಿದ್ದಾರೆ. ಆ ಹೇಳಿಕೆಯನ್ನು ಪ್ರೂವ್ ಮಾಡು ವುದು, ಡಿಸ್‌ಪ್ರೂವ್ ಮಾಡುವುದು ಅದು ನೆಕ್ಸ್ಟ್ ಸ್ಟೇಜ್. ಇಲ್ಲದೇ ಹೋದರೆ ಅದು ಪ್ರಿವಿಲೇಜ್ ಆಗುವುದಿಲ್ಲ. ಮಾನ್ಯ ವಿರೋಧಪಕ್ಷದ ನಾಯಕರಿಗೆ ನಾನು ಇಷ್ಟೇ ಸಲಹೆ ಕೊಡುತ್ತೇನೆ. ಅದಕ್ಕೆ ಬೇರೆ ರೂಲು ೩೦೧ ಇದೆ, ಆ ೩೦೧ ರಲ್ಲಿ ಬೇಕಾದರೆ ಡಿಸ್ಕಸ್ ಮಾಡಲಿ. ಸಬ್ಜೆಕ್ಟೇ ಅದು ಶ್ರೀಮಾನ್ ಕೆ.ಹೆಚ್. ರಂಗನಾಥ್‌ರವರ ಮೇಲಿನ ಹಲ್ಲೆ ಬಗ್ಗೆ ಮಾನ್ಯ ಬಂಗಾರಪ್ಪನವರು ಈ ಒಂದು ಸನ್ನಿವೇಶ ವನ್ನು ಕ್ರಿಯೇಟ್ ಮಾಡಿದರು. ಅದನ್ನೇ ನೇರವಾಗಿ ಚರ್ಚೆ ಮಾಡೋಣ. ಇದನ್ನೇ ಏತಕ್ಕೆ ಸುತ್ತಿ ಬಳಸಿ ಚರ್ಚೆ ಮಾಡುವುದು? ಅದಕ್ಕೋಸ್ಕರ ನಾನು ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ ನಂದಕುಮಾರ್‌ರವರ ಹೇಳಿಕೆ ಕಂಟೆಂಟ್ಸ್ ಏನು ಇದೆ ಅದರ ಸತ್ಯಾಸತ್ಯತೆಯನ್ನು ಅದರಲ್ಲಿ ಚರ್ಚೆ ಮಾಡೋಣ. ಇದು ನನ್ನ ಸಲಹೆ. ಇಲ್ಲದಿದ್ದರೆ ಇದು ವಿನಾ ಕಾರಣ ಸಮಯವಾಗುತ್ತದೆ,

ಅಧ್ಯಕ್ಷರು.—ಇದರ ಬಗ್ಗೆ ಡಿಸ್ಕಸ್ ಮಾಡಬೇಕಾದರೆ ಅದು ೩೦೧ರ ವ್ಯಾಪ್ತಿಯಲ್ಲಿ ಅನ್ವಯಿಸಿ ಮಾತನಾಡಿ. ತಾವು ಮುಕ್ತಾಯ ಮಾಡಿ.

ಶ್ರೀ ಎಸ್. ಬಂಗಾರಪ್ಪ.—ನಾನು ಹೇಳಬೇಕಾದರೆ ನೀವು ಪದಗಳನ್ನು ಕೇಳಿದರೋ ಇಲ್ಲವೋ ಗೊತ್ತಿಲ್ಲ. ೩೦೧ ರೂಲು ಪ್ರಕಾರ ನಿಯಮಾವಳಿ ಪ್ರತ್ಯೇಕವಾಗಿದೆ. ಅದರ ಬಗ್ಗೆ ಡಿಸ್ಕಸ್‌ಗೆ ಬಂದಾಗ ಪ್ರತ್ಯೇಕವಾಗಿ ಹೇಳುವುದಕ್ಕೆ ಎಲ್ಲ ವಿವರಗಳೂ ನನ್ನಲ್ಲಿ ಉಂಟು ಹೇಳೋಣ. ವೈಯಕ್ತಿಕವಾಗಿ ಆ ಪ್ರಶ್ನೆ ಬಂದಾಗ ಆ ವಿಚಾರಗಳನ್ನು ಹೇಳೋಣ. ಆದುದರಿಂದ ನಾನು ಈಗ ಆ ವಿವರಗಳಿಗೆ ಹೋಗು ವುದಕ್ಕೆ ಸಾಧ್ಯವಾಗುವುದಿಲ್ಲ. ಅದನ್ನು ಪ್ರೂವ್ ಮಾಡಬೇಕು ಎಂದು ತಾವು ಹೇಳುವುದನ್ನು ನಾನು ಒಪ್ಪುತ್ತೇನೆ. ಆದರೆ ಮಾನ್ಯ ರಾಚಯ್ಯನವರು ಏನು ಓದಿದ್ದಾರೆ. ಆ ಎಲ್ಲಾ ವಿವರಗಳು ಕೂಡ ಸಂಪೂರ್ಣವಾಗಿ ಅದು ಸದನದ ಸ್ವತ್ತಾಗುತ್ತದೆ.

ಅಧ್ಯಕ್ಷರು.—ರಿಪೀಟ್ ಮಾಡಬೇಡಿ.

ಶ್ರೀ ಎಸ್. ಬಂಗಾರಪ್ಪ.—ಇದರಲ್ಲಿ ಏನು ಅಸತ್ಯ. ಕಾನೂನುಬಾಹಿರವಾದ ವಿಚಾರಗಳ ಮೇಲೆಯೇ ನಾನು ಈ ಹಕ್ಕುಭಾಧ್ಯತಾ ನಿರ್ಣಯವನ್ನು ಕಳಿಸಿರುವುದರಿಂದ ಈ ವಿಚಾರ ಹೇಗೆ ಅಸತ್ಯ ವಾಗುತ್ತದೆ ಎನ್ನತಕ್ಕಂಥಾ ಮಾತನ್ನು ನಾವು ಹೇಳತಕ್ಕಂಥಾದ್ದು ಅವಶ್ಯ ಎಂದು ಅನಿಸುತ್ತದೆ ಇಲ್ಲದಿ ದ್ದರೆ ಅದನ್ನು ನಾವು ಟಚ್ ಮಾಡಬೇಕಾದ ಅವಶ್ಯಕತೆ ಬರುತ್ತಿರಲಿಲ್ಲ. ಈಗ ನಾನು ಒಂದು ವಿಷಯ ವನ್ನು ತಮ್ಮ ಗಮನಕ್ಕೆ ತರುತ್ತೇನೆ.

MR. SPEAKER.—You have sufficiently explained. ೩೦೧ರ ರೂಲು ಪ್ರಕಾರ ಇದರ ಬಗ್ಗೆ ಡಿಸ್ಕಸ್ ಮಾಡುವುದಕ್ಕೆ ಎರಡು ದಿವಸ ಅಲ್ಲ, ೪ ದಿವಸ ಅವಕಾಶ ಕೊಡೋಣ.

ಶ್ರೀ ಎಸ್. ಬಂಗಾರಪ್ಪ.—ಇಲ್ಲಿ ಇರತಕ್ಕಂಥಾ ಪ್ರಶ್ನೆ ಇದು ಅಸತ್ಯ ಆಗಿದೆ ಎನ್ನತಕ್ಕಂಥಾ ಮಾತಿಗೆ ನಾನು ಅದನ್ನು ತಮ್ಮ ಗಮನಕ್ಕೆ ತರಲೇಬೇಕಾಗಿದೆ,

ಅಧ್ಯಕ್ಷರು.—ತಾವು ಈಗ ಅದೆಲ್ಲಾ ಹೇಳಿದ್ದೀರಿ. ಮತ್ತೊಮ್ಮೆ ನಾನು ತಮಗೆ ನೆನಪು ಮಾಡಿ ಕೊಡುತ್ತೇನೆ. hearsay—concocted—irrelevant ಅಸತ್ಯವಾದುದು ಅಂತ ಹೇಳಿದ್ದೀರಿ. ಮುಕ್ತಾಯ ಮಾಡಿರಿ.

ಶ್ರೀ ಎಸ್. ಬಂಗಾರಪ್ಪ.—ಅದು ಹೇಗೆ ಅಸತ್ಯ ಅದು ಹೇಗೆ Armshots ಎಂದು ಹೇಳಬೇ ಕಾಗಿದೆ, It is very, very far from truth ಎನ್ನುವ ಮಾತಿಗೆ ನಾನು ಇಲ್ಲಿ ಒಂದು

ಡಾಕ್ಯುಮೆಂಟ್ ಅನ್ನು ಕೋಟ್ ಮಾಡಬೇಕಾಗಿದೆ. ಏಕೆಂದರೆ ಅದು ಅಸತ್ಯ ಎನ್ನುವುದನ್ನು ತೋರಿಸಬೇಕಾಗುತ್ತದೆ. ಮಾನ್ಯ ಸಭಾಧ್ಯಕ್ಷರೇ, ೫–೨–೧೯೮೬ರಲ್ಲಿ ಒಂದು ಕಂಪ್ಲೈಂಟ್ ಅನ್ನು ಪೋಲೀಸ್ ಕಮೀಷನರಿಗೆ ಕೊಟ್ಟಿದ್ದಾರೆ. ವಿ.ಜಿ. ಸತ್ಯಾನಂದ ಅನ್ನುವವರು ಆ ಕಂಪ್ಲೈಂಟ್‌ನಲ್ಲಿ ಏನು ಹೇಳಿದ್ದಾರೆ ಅವರು ನಂದಕುಮಾರ್ ಅವರ ಬ್ರದರ್. ಇದು ಅಸತ್ಯವೇ ಇಲ್ಲವೇ ಅನ್ನುವುದನ್ನು ತೋರಿಸಬೇಕಾಗಿದೆ.

SRI A. LAKSHMISAGAR.—My submission is that it is not relevent.

ಶ್ರೀ ಎಸ್. ಬಂಗಾರಪ್ಪ.—ಅದು ಅಸತ್ಯ ಎನ್ನುವುದನ್ನು ತೋರಿಸಬೇಕಾಗುತ್ತದೆ.

SRI A LAKSHMISAGAR.—It should not go on record. That portion which has reference to Nandakumars brother has no relevance.

ಶ್ರೀ ಎಸ್. ಬಂಗಾರಪ್ಪ.—ಇದು ಪಬ್ಲಿಕ್ ಡಾಕ್ಯುಮೆಂಟ್ ಇದರಲ್ಲಿ ಮುಚ್ಚುಮರೆ ಇಲ್ಲ,

(ಗೊಂದಲ)

ಅಧ್ಯಕ್ಷರು.—ನೀವು ಏನು ನೋಟೀಸ್ ಕೊಟ್ಟಿದ್ದೀರ ಆ ನೋಟೀಸಿನಲ್ಲಿರುವುದನ್ನು ಪ್ರಸ್ತಾಪ ಮಾಡಿ. ಬೇರೆ ಡಾಕ್ಯುಮೆಂಟ್ಸನ್ನು ಪ್ರಸ್ತಾಪ ಮಾಡಲಿಕ್ಕೆ ಹೋಗಬೇಡಿ.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಆ ವಿಷಯಕ್ಕೆ ಸಂಬಂಧಪಟ್ಟಂತೆ ಇರುವುದನ್ನು ಪ್ರಸ್ತಾಪ ಮಾಡಲಿ. ತಮ್ಮ ವ್ಯಾಖ್ಯಾನವನ್ನು ಆ ವಿಷಯಕ್ಕೇನೇ ಸೀಮಿತಗೊಳಿಸುವ ರೀತಿಯಲ್ಲಿ ಅವರ ವ್ಯಾಖ್ಯಾನ ನಡೆಯಬೇಕು. ವಿಷಯದಲ್ಲಿ ಏನು ಬಂದಿದೆ ಅದರಲ್ಲಿ ಲಗತ್ತಿಸಿರುವ ವಿಷಯ ಎಂಥಾದ್ದು, ಪೋಲೀಸ್ ಇನ್ಸ್‌ಪೆಕ್ಟರ ವಿಚಾರ ಎಂಥಾದ್ದು ಅದು ಬರುವುದಿಲ್ಲ. ಇದು ಪ್ರಿವಿಲೇಜ್ ಕಮಿಟಿ ಮುಂದೆ ಬಂದಾಗ ಅದನ್ನು ಸಾಬೀತು ಮಾಡುವುದಕ್ಕೆ ಅವರಲ್ಲಿರತಕ್ಕಂಥ ವಿಚಾರ ಎಲ್ಲಾ ಕಾಗದ ಪುರಾವೆಗಳನ್ನು, ಪತ್ರಗಳನ್ನು ಮತ್ತು ಇತರೆ ವಸ್ತುಗಳನ್ನೂ ಹಾಜರುಪಡಿಸಿ ಸಾಕ್ಷಿ ಕೊಡುವುದಕ್ಕೂ ಅವಕಾಶ ಇದೆ. ಆ ಹಂತಕ್ಕೆ ನಾವು ಇನ್ನೂ ಹೋಗಿಲ್ಲ. ಆ ಮಟ್ಟಕ್ಕೆ ನಾವು ಹೋಗಿಲ್ಲ. ಇದು ಬ್ರೀಚ್ ಆಫ್ ಪ್ರಿವಿಲೇಜ್ ಆಗುತ್ತದೆ ಎನ್ನುವುದರ ಕುರಿತು ವ್ಯಾಖ್ಯಾನ ಮುಂದುವರಿಸಬೇಕೇ ಹೊರತು ಈ ಸಮಯವನ್ನು ಉಪಯೋಗಿಸಿಕೊಂಡು ಈ ವಿಷಯಕ್ಕೆ ಸಂಬಂಧಪಡದೇ ಇರತಕ್ಕ ವಿಚಾರ, ಬ್ರೀಚ್ ಆಫ್ ಪ್ರಿವಿಲೇಜಿಗೆ ಸಂಬಂಧಪಡದೇ ಇರತಕ್ಕಂಥ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ, ವಿಷಯಾಂತರವಾಗುವುದಕ್ಕೆ ಅವಕಾಶವನ್ನು ತಾವು ಮಾಡಿಕೊಡಬಾರದು. ಯಾವ ಒಂದು ಉದ್ದೇಶಕ್ಕೋಸ್ಕರ ಸನ್ಮಾನ್ಯ ಬಂಗಾರಪ್ಪನವರು ಈ ವಿಷಯವನ್ನು ಪ್ರಸ್ತಾಪ ಮಾಡುತ್ತಾ ಇದ್ದಾರೆ ಅದನ್ನು ಬಿಟ್ಟು ಆ ಗಡಿ ದಾಟಿ ಬೇರೆ ಕಡೆ ಹೋಗುತ್ತಾ ಇದ್ದಾರೆ, ಬೇರೆ ದಿಕ್ಕಿಗೆ ಹೋಗುತ್ತಾ ಇದ್ದಾರೆ, ವಿಷಯಾಂತರವಾಗುತ್ತದೆ. ಆದುದರಿಂದ ತಾವು ಇದಕ್ಕೆ ಅವಕಾಶ ಮಾಡಿಕೊಡಬಾರದು ಎಂದು ಬಹಳ ವಿನಯದಿಂದ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.— ಈಗ ಬೊಮ್ಮಾಯಿಯವರು ಹೇಳಲಿ, ಅವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು.—ನೀವು ಈ ರೀತಿ ಮಾಡುವುದು ಸರಿಯಲ್ಲ.

(ಗೊಂದಲ)

SRI S.R. BOMMAI.—Rule 191 says

"A member wishing to raise a question of privilege shall give notice in writing to the Secretary before the commencement of the sitting on the day the questioning is proposed to be raised. If the question raised is basedon a document, the notice shall be accompanied by the document".

ಅವರು ಯಾವುದೇ ಒಂದು ದಾಖಲೆಯನ್ನು ಪ್ರಿವಿಲೇಜ್ ಮೋಷನ್ ಬಗ್ಗೆ ಆಧಾರ ಮಾಡುತ್ತಿದ್ದರೆ ಅದನ್ನು ನೋಟೀಸಿನ ಜೊತೆಗೆ ಹಚ್ಚಿ ಕೊಡಬೇಕಾಗುತ್ತದೆ. ಬೇರೆ ಬೇರೆ ಇರತಕ್ಕಂಥ ಡಾಕುಮೆಂಟನ್ನು ಇದರಲ್ಲಿ ಉದ್ಧರಿಸಲಿಕ್ಕೆ ಅವಕಾಶವಿಲ್ಲ. ನಿನ್ನೆ ಕೂಡ ಟೇಪರಿಕಾರ್ಡರ್ ವಿಚಾರ ಬಂದಾಗ ನಾವು ಹೇಳಿದೆವು, ಮಾನ್ಯ ಮುಖ್ಯ ಮಂತ್ರಿಗಳೂ ಹೇಳಿದರು, ಅದು ಇರ್ರೆಲವೆಂಟ್, ರೆಫರ್ ಮಾಡತಕ್ಕ ಅಗತ್ಯ ಇಲ್ಲ ಎಂದು ಹೇಳಿದರು. ಅಸತ್ಯ ಹೇಳುವುದಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮೆಂಬರ್ ಮೇಲೆ ಎತ್ತಿದರಲ್ಲಾ ಅವರು ನೋಟೀಸ್ ಕೊಟ್ಟಿದ್ದಿರೆ ? ಒಬ್ಬೊಬ್ಬರಿಗೆ ಒಂದೊಂದು ರೂಲೇ.

ಶ್ರೀ ಎಸ್. ಆರ್. ಬೊಮ್ಮಾಯಿ.—ಒಬ್ಬೊಬ್ಬರಿಗೆ ಒಂದೊಂದು ರೂಲ್ ಅಲ್ಲ. Rule 191 is very clear. If the Hon'ble Leader of the Opposition wants to relay on a document that should have been attached to the notice. ಬೇರೆ ಕಾಗದ ಪತ್ರಗಳನ್ನು ಇಲ್ಲಿ ಉದ್ಧರಿಸಲಿಕ್ಕೆ ಬರುವುದಿಲ್ಲ.

ಅಧ್ಯಕ್ಷರು.—ಬಂಗಾರಪ್ಪನವರೇ ನೀವು ಬೇರೆ ಡಾಕ್ಯುಮೆಂಟನ್ನು ಹಾಜರು ಮಾಡಬೇಡಿ. ಇದರ ಮೇಲೆ ಏನಾದರೂ ಹೇಳಿ.

ಶ್ರೀ ಎಸ್. ಬಂಗಾರಪ್ಪ.—ಹಾಜರು ಮಾಡುವುದಕ್ಕೆ ಹೋಗುವುದಿಲ್ಲ.

MR. SPEAKER.—No. I will not allow to read any other document except this notice. ಇದರ ಮೇಲೆ ಏನಾದರೂ ಹೇಳಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೆ, ನಾನು ಏನು ಹೇಳಿದ್ದೇನೆ ನೋಟೀಸಿನಲ್ಲಿ ಅದಂರೆ ಇಲ್ಲಿ "ಫಾಲ್ಸ್ ಡಾಕ್ಯುಮೆಂಟ್" ಎನ್ನತಕ್ಕಂಥ ಮಾತನ್ನು ಹೇಳಿದ್ದೇನೆ. ನಾನು ಹಕ್ಕು ಚ್ಯುತಿ ನಿರ್ಣಯವನ್ನು ಮಂಡನೆ ಮಾಡಿ ಒಬ್ಬ ಸದಸ್ಯರದು ಅಥವಾ ನನ್ನದು ಯಾವ ರೀತಿ ಹಕ್ಕುಚ್ಯುತಿಯಾಗಿದೆ ಎನ್ನತಕ್ಕಂಥ ಮಾತನ್ನು ಹೇಳಬೇಕಾದರೆ ಇಲ್ಲಿ ಇಂಟೆನ್‌ಷನಲಿ ಏನು ನಡೆಯುತ್ತಿದೆ ಎನ್ನತಕ್ಕಂಥಾದ್ದು ಮತ್ತು ಅಸತ್ಯವಾಗಿರತಕ್ಕ ವಿಚಾರಗಳು ಹೇಗಿದೆ ಎನ್ನುವುದನ್ನು ರುಜುವಾತುಪಡಿಸಿ ತೋರಿಸಬೇಕು. ಇಲ್ಲಿರತಕ್ಕ ವಿಚಾರ ಏನೆಂದರೆ ಅವರು ಹೇಳಿದ್ದು "ನಂದ ಕುಮಾರ್‌ರವರನ್ನು ಯಾರೋ ಮರ್ಡರ್ ಮಾಡಿಬಿಟ್ಟರು" ಎನ್ನತಕ್ಕಂಥ ವಿಚಾರ. ಅವರ ಬ್ರದರ್ ಏನು ಕೊಟ್ಟಿದ್ದಾರೆಂದರೆ, ಪೋಲೀಸ್ ಕಮೀಷನರಿಗೆ ಕಂಪ್ಲೈಂಟ್‌ನ್ನು ಕೊಟ್ಟಾಗ......

ಅಧ್ಯಕ್ಷರು.—ಬಂಗಾರಪ್ಪನವರೆ, ಬೇರೆ ಡಾಕ್ಯುಮೆಂಟನ್ನು ದಯವಿಟ್ಟು ಓದಬೇಡಿ.

SRI S. BANGARAPPA.—I will have to prove that their statement is false......

ಅಧ್ಯಕ್ಷರು.—ಅದನ್ನು ನಾನು ಅಲೋ ಮಾಡುವುದಿಲ್ಲ.

SRI R. BANGARAPPA.—Under what rule?

ಅಧ್ಯಕ್ಷರು.—ನೀವು ಸಾವಿರಾರು ಡಾಕ್ಯುಮೆಂಟ್ಸ್ ಹೇಳುತ್ತಾ ಇದ್ದರೆ......

ಶ್ರೀ ಎಸ್. ಬಂಗಾರಪ್ಪ.—ಪೋಲೀಸರೇ ಕೊಲ್ಲಿಸಿದ್ದಾರೆ ಎನ್ನತಕ್ಕಂಥ ಕಂಪ್ಲೈಂಟ್ ಕೊಟ್ಟಿದ್ದಾರೆ. ಅದರ ಕಾಪಿ ಇದೆ. ಪೋಲೀಸರು ಕೊಲ್ಲಿಸಿದ್ದಾರೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ, ಇದನ್ನು ಚೀಫ್ ಮಿನಿಸ್ಟರಿಗೆ ಕಳಿಸಿದ್ದಾರೆ. ಡಿಸಿಪಿಗೆ ಕಳಿಸಿದ್ದಾರೆ, ಪೋಲೀಸ್ ಕಮೀಷನರಿಗೆ ಕಳಿಸಿದ್ದಾರೆ, ಹೋಂ ಮಿನಿಸ್ಟರಿಗೆ ಕಳಿಸಿದ್ದಾರೆ. ಮಾನ್ಯ ಸದಸ್ಯರಾದ ಕೆ. ಹೆಚ್. ಶ್ರೀನಿವಾಸ್‌ರವರು ನಿನ್ನೆ ನನ್ನ ಕೈಗೆ ಇದನ್ನು ಕೊಟ್ಟರು. ಇದು ನನಗೆ ಗೊತ್ತಿರಲಿಲ್ಲ, ನಾನು ಊರಿನಲ್ಲಿರಲಿಲ್ಲ.

MR. SPEAKER.—I will not allow you to read any other document.

ಶ್ರೀ ಎಸ್. ಬಂಗಾರಪ್ಪ.—ಏಕೆ ನೀವು ಅಲೋ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ?

(ಗೊಂದಲ)

MR. SPEAKER.—Nothing will go on record.

(Interruption)

ಅಧ್ಯಕ್ಷರು.—ಬಂಗಾರಪ್ಪನವರೆ, ನೀವು ಇದರ ಬಗ್ಗೆ ಏನಾದರೂ ಹೇಳಿ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಇದು ರಾಜಕೀಯ ಕೊಲೆ.

MR. SPEAKER.—I will have to say-nothing will go on record.

ಅಧ್ಯಕ್ಷರು.—ಬಂಗಾರಪ್ಪನವರೇ ನೀವು ಮುಗಿಸಿ. ಅವರು ಹೇಳಿದಹಾಗೆ ನಿಯಮ ೩೦೧ ರ ವ್ಯಾಪ್ತಿಯಲ್ಲಿ ಬೇಕಾದ್ದು ಹೇಳಿ, ಆದರೆ ಈಗ ಇದರಲ್ಲಿ ಹೇಳುವುದಕ್ಕೆ ಬರುವುದಿಲ್ಲ, ದಯವಿಟ್ಟು ಮುಕ್ತಾಯಮಾಡಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೆ, ಈ ಕಡೆ ತಾವು ಗಮನಕೊಡಬೇಕು, ಈಗ ಅವರು ಶಾಸನ ಸಭೆಯಲ್ಲಿ ಓದಿರತಕ್ಕ ಹೇಳಿಕೆ ಅಸತ್ಯ ಎನ್ನುವುದಕ್ಕೋಸ್ಕರ, ತೋರಿಸುವುದಕ್ಕೋಸ್ಕರ ನಾನು ಇದನ್ನು ಓದಬೇಕಾಗಿದೆ.

ಅಧ್ಯಕ್ಷರು.—ಅದೆಲ್ಲಾ ಅನ್‌ನೆಸೆಸರಿ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಪತ್ರಿಕೆಗಳನ್ನಾಗಿ ಮಾಡುವ ಬದಲು... ..

(ಗೊಂದಲ)

ಅಧ್ಯಕ್ಷರು.—ಬಂಗಾರಪ್ಪನವರೇ, ತಾವು ಮುಗಿಸಿ.

ಶ್ರೀ ಎಸ್. ಬಂಗಾರಪ್ಪ.—ಯಾವ ಮಟ್ಟಕ್ಕೆ ಸರ್ಕಾರ ಹೋಗಿದೆ ಎನ್ನುವುದನ್ನು ತಮ ಗಮನಕ್ಕೆ ತರುತ್ತಿದ್ದೇನೆ. ಇದನ್ನು ತಮಗೆ ಕಳಿಸಿಕೊಡುತ್ತಿದ್ದೇನೆ.

ಅಧ್ಯಕ್ಷರು.—ಈಗ ತಾವು ಮುಕ್ತಾಯ ಮಾಡಿ.

ಶ್ರೀ ಎಸ್. ಬಂಗಾರಪ್ಪ.—ಇವರ ಕೈಯಲ್ಲಿ ಸರ್ಕಾರ ನಡೆಸುವುದಕ್ಕೆ ಆಗಲಿಲ್ಲ......

MR. SPEAKER.—Nothing will go on record.

(ಗೊಂದಲ)

ಅಧ್ಯಕ್ಷರು.—ಬಂಗಾರಪ್ಪನವರೆ. ತಾವು ಇಷ್ಟು ಸಿಟ್ಟಿಗೇಳಬಾರದು, ಸಮಾಧಾನವಾಗಿ ಹೇಳಿ. ಇಲ್ಲದೇ ಹೋದರೆ ರಿಕಾರ್ಡ್ ಮಾಡಬೇಡಿ ಎಂದು ಹೇಳುತ್ತೇನೆ. ಈಗಾಗಲೇ ಎಲ್ಲಾ ಹೇಳಿಯಾಗಿದೆ ದಯವಿಟ್ಟು ಮುಗಿಸಿಬಿಡಿ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ನಿಮ್ಮ ಪೋಲೀಸ್ ಇಲಾಖೆಯಲ್ಲಿ......

ಶ್ರೀ ಬಿ. ರಾಚಯ್ಯ.—ಇವರು ಸಭ್ಯರು, ದರೋಡೆಕಾರರಿಗೆ ಪ್ರೋತ್ಸಾಹ ಕೊಟ್ಟು ನಮಗೆ ಪಾಠ ಹೇಳುವುದಕ್ಕೆ ಬಂದಿದ್ದಾರೆ ಇಲ್ಲಿ.

(ಗೊಂದಲ)

ಶ್ರೀ ಬಿ. ರಾಚಯ್ಯ.—ನಿಮಗೆ ಪ್ರಿವಿಲೇಜ್ ಮೋಷನ್‌ಗೆ ಇಲ್ಲಿ......

ಶ್ರೀ ಎಸ್. ಬಂಗಾರಪ್ಪ.—ಪೋಲೀಸ್ ಇಲಾಖೆಯನ್ನು ಸರಿಯಾಗಿ ನಡೆಸುವುದಕ್ಕೆ ನಿಮ್ಮ ಹಣೆಯಲ್ಲೇ ಬರೆದಿಲ್ಲ.

(ಗೊಂದಲ)

ಅಧ್ಯಕ್ಷರು.—ಈಗ ಸಭಾನಾಯಕರು ಎದ್ದಿದ್ದಾರೆ, ಅವರು ಏನು ಹೇಳುತ್ತಾರೋ ಹೇಳಲಿ.

SRI M. VEERAPPA MOILY.—I am on my legs.

ಅಧ್ಯಕ್ಷರು.—ಅವರೂ ಕೇಳುತ್ತಾ ಇದ್ದಾರೆ, ನೀವೂ ಕೇಳುತ್ತಾ ಇದ್ದೀರಿ. ದಯವಿಟ್ಟು ಕೂಡಿ, ಮಾನ್ಯ ಸಭಾನಾಯಕರನ್ನು ಕರೆದಿದ್ದೇನೆ ಅವರು ಹೇಳಲಿ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮೊದಲು ನನಗೆ ಅವಕಾಶ ಕೊಡಿ,

ಅಧ್ಯಕ್ಷರು.—ನಾನು ಸಭಾನಾಯಕರನ್ನು ಕರೆದಿದ್ದೇನೆ. ಸಭಾನಾಯಕರಿಗೆ ಸಭೆ ಸರಿಯಾಗಿ ನಡೆಯಲಿಕ್ಕೆ ಮಾರ್ಗದರ್ಶನ ಮಾಡುವ ಹಕ್ಕು ಇದೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮೊದಲು ನಾನು ಕೇಳಿದ್ದು.

(ಗೊಂದಲ)

ಅಧ್ಯಕ್ಷರು.—ನಥಿಂಗ್ ವಿಲ್ ಗೋ ಆನ್ ರಿಕಾರ್ಡ್.

(ಗೊಂದಲ)

ಅಧ್ಯಕ್ಷರು.—ಮೊದಲು ಸಭಾನಾಯಕರದು ಆಗಲಿ. ಆಮೇಲೆ ನೀವು ಮಾತನಾಡಿ, ಅವರನ್ನು ಕರೆದಿದ್ದೇನೆ ಈಗ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮೊದಲು ನಾನು ಎದ್ದಿದ್ದೇನೆ, ನನ್ನನ್ನು ಕರೆದಿದ್ದೀರಿ.

ಅಧ್ಯಕ್ಷರು.—ಮೊದಲು ಸಭಾನಾಯಕರು ಎದ್ದಿದ್ದಾರೆ, ಅವರಿಗೆ ಅವಕಾಶ ಕೊಟ್ಟಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಸಭಾನಾಯಕರು ಸೌಜನ್ಯ ಮೂರ್ತಿಯಾಗಿದ್ದರೆ ಸ್ವಲ್ಪ ಕುಳಿತು ಕೊಳ್ಳಲಿ.

ಅಧ್ಯಕ್ಷರು.—ಸಭಾನಾಯಕರು ಮೊದಲು ಎದ್ದಿದ್ದಾರೆ, ಅವರು ಹೇಳಲಿ. ಆಮೇಲೆ ನಿಮಗೆ ಅವಕಾಶ ಕೊಡುತ್ತೇನೆ.

SRI M. VEERAPPA MOILY.—I am on my legs. ಅವರು ಏನು ಹೇಳುತ್ತಾರೆಂದು ನನಗೆ ಗೊತ್ತು.

(ಗೊಂದಲ)

ಅಧ್ಯಕ್ಷರು.—ಸಭಾನಾಯಕರು ಎದ್ದಿದ್ದಾರೆ. ಅವರಿಗೆ ಅವಕಾಶ ಕೊಟ್ಟಿದ್ದೇನೆ. ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಂ. ವೀರಪ್ಪ ಮೊಯ್ಲಿ.—ನನ್ನನ್ನು ತಾವು ಕರೆದಿದ್ದೀರಿ. ದಯವಿಟ್ಟು ವಿಚಾರ ಮಾಡಿ.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಇಷ್ಟು ಹೊತ್ತಿಗೆ......

(ಗೊಂದಲ)

SRI M. VEERAPPA MOILY.—Sir......

ಶ್ರೀ ರಾಮಕೃಷ್ಣ ಹೆಗಡೆ.—ಅಧ್ಯಕ್ಷರೇ, ತಾವು ನನ್ನನ್ನು ಮೊದಲು ಕರೆದಿದ್ದೀರಿ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಆದಕ್ಕೆ ಮೊದಲು ನನ್ನನ್ನು ಕರೆದಿದ್ದೀರಿ. Let him have the courtesy to request me to yield, I will yield.........

ಅಧ್ಯಕ್ಷರು.—ನಿಮಗೆ ಮತ್ತೆ ಅವಕಾಶ ಕೊಡುತ್ತೇನೆ.

(ಗೊಂದಲ)

**SRI RAMAKRISHNA HEGDE.**—I request you to yield...... ಇದೆಲ್ಲಾ ಉಲ್ಲಾಸಲ್ಲ ಯೀಲ್ಡ್, ಆದರೆ ನಾಟಕ ಯಾರದ್ದೆಂದು ಗೊತ್ತಾಗುತ್ತದೆ. ಮಾನ್ಯ ರಾಮಪ್ಪನವರ ನಾಟಕ ಎಲ್ಲರಿಗೂ ಗೊತ್ತುಂಟು.

ಶ್ರೀ ಎಂ. ರಾಮಪ್ಪ.—ನಿಮಗೆ ಇನ್ನೂ ಅರ್ಥವಾಗಿಲ್ಲ, ದೂರ ಇದ್ದೀರಿ.

**ಶ್ರೀ ರಾಮಕೃಷ್ಣ ಹೆಗಡೆ.**—ಒಪ್ಪುತ್ತೇನೆ ಖಂಡಿತ ದೂರ ಇರುವುದೇ ಒಳ್ಳೆಯದು. ತಾವು ನನ್ನನ್ನು ಕರೆದಿರಿ ಅಷ್ಟರಲ್ಲಿ ಮಾನ್ಯ ಮೊಯಿಲಿಯವರು ನಿಂತು ಹೇಳಿದರು ನನ್ನನ್ನು ಯೀಲ್ಡ್ ಆಗಲು ರಿಕ್ವೆಸ್ಟ್ ಮಾಡಿ ಕೊಳ್ಳಲಿ, ನಾನು ಯೀಲ್ಡ್ ಆಗುತ್ತೇನೆಂದು ಹೇಳಿದರು. ಆಯಿತು, ಅದರಂತೆ ನಾನು ಅವರಲ್ಲಿ ರಿಕ್ವೆಸ್ಟ್ ಮಾಡಿಕೊಂಡಿದ್ದೇನೆ. ಇಲ್ಲಿಯವರೆಗೆ ಈ ವಿಚಾರ ಹಕ್ಕುಭಾದ್ಯತೆಯ ವಿಚಾರವಾಗಿ ನಮಗೆಲ್ಲರಿಗೂ ತೋರಿತ್ತು. ಮಾನ್ಯ ವಿರೋಧ ಪಕ್ಷದ ನಾಯಕರು ನಂದ ಕುಮಾರನ ಬಗ್ಗೆ ಗೃಹ ಸಚಿವರು ಕೊಟ್ಟಂತಹ ಹೇಳಿಕೆಯ ಮೇಲೆ ನಮ್ಮ ಹಕ್ಕಿಗೆ ವ್ಯತ್ಯಾಸ ಹೊಂದಿದೆ ಅದಕ್ಕಾಗಿ ಹಕ್ಕು ಭಾದ್ಯತಾ ಸಮಿತಿಗೆ ಕಳಿಸಬೇಕು ಅಥವಾ ಇಲ್ಲೇ ಈ ವಿಚಾರ ಬರಬೇಕೆಂದು ಸೂಚನೆ ಮಾಡಲಿಕ್ಕೆ ಈ ಸೂಚನೆಯನ್ನು ತಂದಿದ್ದಾರೆಂದು ನನ್ನ ಭಾವನೆ. ಅದಕ್ಕೆ ಮೊದಲು ಅನೇಕ ವಿಚಾರವನ್ನು ಪ್ರಸ್ತಾಪ ಮಾಡಿದರು. ಅದರ ಬಗ್ಗೆ ನಾನು ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಈಗ ಏನು ಒಂದು ಹೊಸ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ ಮತ್ತು ಅದನ್ನು ಪ್ರಸ್ತಾಪ ಮಾಡುವಾಗ ಅತ್ಯಂತ್ಯ ಗಂಭೀರವಾದಂತಹ ಆರೋಪವನ್ನು ಮಾಡಿದ್ದಾರೆ. ಅದು ಏನು ? ಇದು ರಾಜಕೀಯ ಕೊಲೆ, ಪೋಲೀಸರಿಂದ ಇವರನ್ನು ಕೊಲೆ ಮಾಡಿಸಿದ್ದೀರಿ ಎಂದು ಹೇಳಿ. ಈ ಸಂದರ್ಭದಲ್ಲಿ ಇಲ್ಲಿ ಹಕ್ಕು ಭಾದ್ಯತೆಯ ಏನು ಒಂದು ಚೌಕಟ್ಟು ಇದೆ, ಆ ಚೌಕಟ್ಟಿಗೆ ಮೀರಿದಂಥಾದ್ದು.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಒಪ್ಪುತ್ತೇನೆ. ನೀವು ಮಾತನಾಡಿ......

ಶ್ರೀ ಎಸ್. ಬಂಗಾರಪ್ಪ.—ಪೋಲೀಸಿನವರೇ ಕೊಲೆ ಮಾಡಿದ್ದಾರೆ ಎನ್ನುವ ವಿಚಾರವನ್ನು ಅವರ ಅಣ್ಣ ಪೋಲೀಸರಿಗೆ ತಿಳಿಸಿ ಕಂಪ್ಲೈಂಟ್ ಕೊಟ್ಟಿದ್ದಾರೆ.

( ಗೊಂದಲ )

ಶ್ರೀ ರಾಮಕೃಷ್ಣ ಹೆಗಡೆ.—ಅಮೇಲೆ ತಾವು ಬಹಳ ಏರಿಸಿದ ಧ್ವನಿಯಲ್ಲಿ ಇಡೀ ಪ್ರಪಂಚಕ್ಕೆ ಕೇಳುವ ರೀತಿಯಲ್ಲಿ ಹೇಳಿದಿರಿ.

ಶ್ರೀ ಎಸ್. ಬಂಗಾರಪ್ಪ.—ಸಧ್ಯ ನಿಮಗೆ ಕೇಳಿಸಿದರೆ ಸಾಕಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಅಯ್ಯೋ ದೇವರೇ ಇನ್ನೂ ನನ್ನ ಕಿವಿ ಕೆಪಾಗಿಲ್ಲ. ನಂತರ ನಿಮ್ಮ ಹಣೆ ಬರಹದಲ್ಲಿ ಬರೆದಿಲ್ಲವೆಂದು ಹೇಳಿದರು. ಹಾಗೆ ಹೇಳತಕ್ಕಂಥಾದ್ದು, ಅದು ಅವರ ಸ್ಟೈಲ್. ಆದಕ್ಕಾಗಿ ನಾನು ಈ ಎಲ್ಲಾ ಪ್ರಕರಣವನ್ನು ಜ್ಯುಡಿಟಿಯಲ್ ಎನ್‌ಕ್ವೈರಿಗೆ ಒಪ್ಪಿಸುತ್ತೇನೆ. ಆದರಲ್ಲಿ ಅವರು ಎಲ್ಲಾ ಹೇಳಲಿ, ಮಾನ್ಯ ರಂಗನಾಥ್‌ರವರ ಮೇಲೆ ಯಾರು ಹಲ್ಲೆ ಮಾಡಿದರು, ಯಾರು ಅವರ ಹಿಂದೆ ಇದ್ದವರು ? ಪೋಲೀಸಿನವರೇ ಕೊಲೆ ಮಾಡಿದರೇ ಅಥವಾ ಬೇರೆಯವರು ಕೊಲೆ ಮಾಡಿದರೇ ಎಂಬುದನ್ನು ಹೇಳಲಿ ಮುಖ್ಯ ನ್ಯಾಯಾಧೀಶರಿಗೆ ಬರೆಯುತ್ತೇನೆ. ಇದಿಷ್ಟನ್ನೂ ನಮ್ಮ ಹೈಕೋರ್ಟಿನ ಸಿಟ್ಟಿಂಗ್ ಜಡ್ಜರವರಿಂದಲೇ ವಿಚಾರಣೆ ಮಾಡಿಸುತ್ತೇನೆ. ನಾನು ಇನ್ನೂ ಒಂದು ಮಾತನ್ನು ಹೇಳುತ್ತೇನೆ. ಇವತ್ತಿನ ದಿವಸ ಮಾನ್ಯ ವಿರೋಧ ಪಕ್ಷದ ನಾಯಕರು ಚಾರಿತ್ರ್ಯ ವಧೆ ಬಗ್ಗೆ ಬಹಳ ನೋವಾಗುತ್ತಿದೆ ಎಂದು ಹೇಳಿದರು, ನೋವಾಗತಕ್ಕದ್ದು ಅವರೊಬ್ಬರಿಗೇ ಎಂದು ಕಾಣುತ್ತದೆ. ಇಲ್ಲಿ ಮೂರು ವರ್ಷದವರೆಗೆ ಅವರು ಚಾರಿತ್ರ್ಯ ವಧೆಯ ಹೊರತು ಬೇರೆ ಯಾವ ಕೆಲಸವನ್ನೂ ಮಾಡಿಲ್ಲವೆಂದು ನಾನು ಹೇಳುತ್ತೇನೆ. ನಾನು ಈಗಲೂ ಹೇಳುತ್ತೇನೆ. ಬಾಕಿ ಯಾವ ವ್ಯವಹಾರವಲ್ಲ. ಬಾಟ್ಲಿಂಗ್ ವ್ಯವಹಾರದಲ್ಲಿ ಇಬ್ಬರು ಯಾರು ಬಾಟ್ಲಿಂಗ್‌ಗೆ ಅರ್ಜಿ ಹಾಕಿದ್ದರೋ, ಅವರ ಹತ್ತಿರ ದುಡ್ಡನ್ನು ತೆಗೆದುಕೊಂಡು ಅವರು ಇಲ್ಲಿ ಆರೋಪ ಮಾಡಿದ್ದಾರೆಂದು ಹೇಳುತ್ತೇನೆ. ನೀವು ಬನ್ನಿ, ಪ್ರಿವಿಲೇಜ್ ಕಮಿಟಿಗೆ ಹಾಕುವುದಾದರೆ ಹಾಕಿ, ಅದನ್ನು ನಾನು ಪ್ರೂವ್ ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಇಲ್ಲಿ......

( ಗೊಂದಲ )

ಶ್ರೀ ರಾಮಕೃಷ್ಣ ಹೆಗಡೆ.—ಯಾರು ಇಬ್ಬರು ಬಾಟ್ಲಿಂಗ್ ಅರ್ಜಿ ಹಾಕಿದ್ದಾರೆ. ಅವರಿಂದ ನೀವು ದಂಡ್ಸನ್ನು ತೆಗೆದುಕೊಂಡಿದ್ದೀರಿ, ತಮಗೆ ಸಿಗಲಿಲ್ಲವೆನ್ನುವ ಕಾರಣದಿಂದ ಅವರಿಂದ ನೀವು ದುಡ್ಡು ತೆಗೆದುಕೊಂಡು ಇಲ್ಲಿ ಆ ವಿಚಾರವನ್ನು ಪ್ರಸ್ತಾಪ ಮಾಡಿ, ನಮ್ಮ ಮೇಲೆ ಆರೋಪ ಮಾಡಿದ್ದೀರಿ! ನಿಮಗೆ ಗಂಡಸುತನವಿದ್ದರೆ ಬನ್ನಿ. ನೀವು ಮೂರು ವರ್ಷದಿಂದ ಮಾಡಿದ್ದು ಏನು ? ಮೂರು ವರ್ಷದಿಂದ ಇಲ್ಲಿ ಚಾರಿತ್ರ್ಯ ವಧೆಯಾಗಿದೆ. ಇವರೊಬ್ಬರಿಗೇ ಚಾರಿತ್ರ್ಯವಿದೆಯೇ.

( ಎರಡೂ ಕಡೆಯ ಸದಸ್ಯರು ಒಮ್ಮೆಲೆ ಎದ್ದುನಿಂತು ಮಾತನಾಡತೊಡಗಿದರು. )

( ಗೊಂದಲ )

ಶ್ರೀ ಎಸ್. ಬಂಗಾರಪ್ಪ.—ದಯವಿಟ್ಟು, ಪಾಪ...... He is off the track.

( ಗೊಂದಲ )

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ ಮುಕ್ತಾಯ ಮಾಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ. ನನ್ನದೊಂದು ಕ್ರಿಯಾಲೋಪ. ನಾನು ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಸನ್ಮಾನ್ಯ ಮುಖ್ಯ ಮಂತ್ರಿಗಳು. ಮಾತನಾಡುತ್ತಾ ಈ ಬಾಟ್ಲಿಂಗ್ ವ್ಯವಹಾರದಲ್ಲಿ ಮಾನ್ಯ ಬಂಗಾರಪ್ಪನವರು ಸಹ ದುಡ್ಡು ತೆಗೆದುಕೊಂಡಿದ್ದು ಇದೆ, ಬೇಕಾದರೆ ಇದಕ್ಕೆ ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡಿಸುತ್ತೇವೆಂದು ಹೇಳಿದರು. ಬೇಕಾದರೆ ಅಲ್ಲ, ನಾನು ಹೇಳಬೇಕೆಂದಿರುವುದು ಮಾನ್ಯ ರಂಗನಾಥ್‌ರವರ ಕೊಲೆ ಸಂದರ್ಭದಲ್ಲಿ ಏನಾಗಿದೆ, ಅದನ್ನು ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡುವುದರ ಜೊತೆಗೆ ಇದನ್ನೂ ಮಾಡಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ. ನಾನು ಹೇಳುವುದೇನೆಂದರೆ, ಈ ರಾಜ್ಯದ ಜನತೆಯ ಪ್ರಶ್ನೆ. ಇದು ಅವರ ಆಗು ಹೋಗುಗಳ ಪ್ರಶ್ನೆ. ಈ ಬಾಟ್ಲಿಂಗ್ ವ್ಯವಹಾರದಲ್ಲಿ ದುಡ್ಡು ಕಾಸು ವ್ಯವಹಾರ ಏನು ನಡೆದಿದೆ ಅದನ್ನೂ ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡಬೇಕೆಂದು ಹೇಳುತ್ತೇನೆ. ಈ ಎರಡನ್ನೂ ಎನ್‌ಕ್ವೈರಿ ಮಾಡಿ. ರಾಜ್ಯದ ಜನತೆಗೆ ಗೊತ್ತಾಗಬೇಕು. ಸತ್ಯಾಸತ್ಯತೆ ಹೊರಗಡೆ ಬರಲಿ.

( ಗೊಂದಲ )

ಶ್ರೀ ರಾಮಕೃಷ್ಣ ಹೆಗಡೆ.—ಯಾವ ವಿಚಾರ ಇನ್ನೂ ಸುಪ್ರೀಂ ಕೋರ್ಟ್ ಮುಂದೆ ಇದೆಯೋ ಅದೆಲ್ಲಾ ಆಗುವುದಿಲ್ಲ. ನೀವು ಪ್ರಿವಿಲೇಜ್ ಕಮಿಟಿಗೆ ಹಾಕಿ, ಮಾನನಷ್ಟ ಮೊಕದ್ದಮೆ ಹಾಕಿ, ಧೈರ್ಯವಿದ್ದರೆ ಹಾಕಿ. ಎಕ್ಸೈಸ್ ಕಂಟ್ರಾಕ್ಟರ್‌ರವರ ಏಜೆಂಟ್ ಆಗಿ ಇಲ್ಲಿ ಕೆಲಸ ಮಾಡುತ್ತಿದ್ದಾರೆ. ನಾನು ಪ್ರೂವ್ ಮಾಡುತ್ತೇನೆ.

( ಗೊಂದಲ )

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ......

ಅಧ್ಯಕ್ಷರು.—ಮುಕ್ಕಾಲು ಗಂಟೆ ಕೊಟ್ಟಿದ್ದೇನೆ. ಬೇಗ ಮುಕ್ತಾಯ ಮಾಡಿ.

ಶ್ರೀ ಎಸ್. ಬಂಗಾರಪ್ಪ.—ಗೊತ್ತಾಗುತ್ತದೆ ಕುಳಿತುಕೊಳ್ಳಿ. ನಿಮ್ಮ ಬುದ್ಧಿ ಯಾವ ತರಹ ಓಡುತ್ತಿದೆಯೆಂದು ಗೊತ್ತಾಗುತ್ತದೆ.

೨-00 ಪಿ. ಎಂ.

( ಗೊಂದಲ )

ಶ್ರೀ ರಾಮಕೃಷ್ಣ ಹೆಗಡೆ.—ಇವರು ಎಕ್ಸೈಜ್ ಕಾಂಟ್ರಾಕ್ಟರ್‌ಗಳ ಏಜೆಂಟ್ಸ್ ಆಗಿ ಇಲ್ಲಿ ಕೆಲಸ ಮಾಡುತ್ತಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ......

ಅಧ್ಯಕ್ಷರು.—ಬಂಗಾರಪ್ಪನವರೆ, ತಾವು ಮುಕ್ಕಾಲು ಗಂಟೆ ಮಾತನಾಡಿದ್ದೀರಿ. ಬೇಗ ಮುಗಿಸಿ.

ಶ್ರೀ ರಾಮಕೃಷ್ಣ ಹೆಗಡೆ.—ಬಂಗಾರಪ್ಪನವರೇ ನೀವು ಏನು ಮಾತನಾಡುತ್ತಿದ್ದೀರಿ ? ಅದನ್ನು ನಾನು ಪ್ರೂವ್ ಮಾಡುತ್ತೇನೆ, ಮಾನನಷ್ಟ ಮೊಕದ್ದಮೆ ಹಾಕಿ.

( ಗೊಂದಲ )

ಶ್ರೀ ರಾಮಕೃಷ್ಣ ಹೆಗಡೆ.— ನೀವು ಏನು ಪ್ರಶ್ನೆ ಮಾಡುತ್ತಿದ್ದೀರಿ ?

ಶ್ರೀ ಎಸ್. ಬಂಗಾರಪ್ಪ.—ನಿಮ್ಮ ಬುದ್ಧಿ ಯಾವ ರೀತಿ ಓಡುತ್ತಿದೆ ಎಂಬುದು ಗೊತ್ತಾಗುತ್ತಿದೆ.

ಅಧ್ಯಕ್ಷರು.—ಬಂಗಾರಪ್ಪನವರೆ, ನೀವು ಬೇಗ ಮುಗಿಸಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ನಮ್ಮ ಸಭಾ ನಾಯಕರು ಎರಡು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಈಗ ಈ ಸಂದರ್ಭದಲ್ಲಿ ತಮ್ಮ ಅವಗಾಹನೆಗೆ ತರತಕ್ಕದ್ದು ಇಷ್ಟೇ......

( ಗೊಂದಲ )

ಶ್ರೀ ಎಸ್. ಬಂಗಾರಪ್ಪ.—ಈ ರೀತಿ ಎಲ್ಲರೂ ಮಾತನಾಡುತ್ತಿದ್ದರೆ ನಾವು ಮಾತನಾಡುವುದು ಬಹಳ ಕಷ್ಟವಾಗುತ್ತದೆ. ತಾವು ಈ ರೀತಿ ಅಲೋ ಮಾಡಬಾರದು ಸೀರಿಯಸ್ ಪ್ರಶ್ನೆ ಇದು.

ಅಧ್ಯಕ್ಷರು.—ನೀವೊಂದು ಸೀರಿಯಸ್, ಅವರೊಂದು ಸೀರಿಯಸ್ ಎನ್ನುತ್ತಿದ್ದರೆ ಹೇಗೆ ?

ಶ್ರೀ ಎಂ. ಎಸ್. ಕೃಷ್ಣನ್.—ನಾವು ಎಲ್ಲಿಗೆ ಹೋಗುತ್ತಿದ್ದೇವೆ ?

( ಗೊಂದಲ )

ಅಧ್ಯಕ್ಷರು.—ಮಾನ್ಯ ಕೃಷ್ಣನ್‌ರವರೆ, ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಪಾಯಿಂಟ್ ಆಫ್ ಆರ್ಡರ್ ಎತ್ತುತ್ತಿದ್ದೇನೆ. ನಾವು ಇಲ್ಲಿ ಕುಳಿತಿರತಕ್ಕದ್ದು ನಮ್ಮ ಡಿಮ್ಯಾಂಡ್‌ಗಳ ಬಗ್ಗೆ ಚರ್ಚೆ ಮಾಡುವುದಕ್ಕೋಸ್ಕರ, ಜನಗಳ ಸಮಸ್ಯೆಯನ್ನು ಚರ್ಚೆ ಮಾಡುವುದಕ್ಕೋಸ್ಕರ. ಆದರೆ ನಿನ್ನೆಯಿಂದ ಏನು ನಡೆಯುತ್ತಿದೆ ಎಂದರೆ ಈ ಪ್ರಿವಿಲೇಜ್ ಮೋಷನ್ ಒಂದಾದ ಮೇಲೆ ಒಂದರಂತೆ ನಡೆಯುತ್ತಿದೆ.

ಶ್ರೀ ಎಸ್. ಬಂಗಾರಪ್ಪ.—ಯಾರು ತಂದರು ?

ಶ್ರೀ ಎಂ ಎಸ್. ಕೃಷ್ಣನ್.—ಯಾರೇ ತೆಗೆದುಕೊಂಡು ಬರಲಿ. ಆದರೆ ಇದರ ಬಗ್ಗೆ ಚರ್ಚೆ ನಡೆಯುತ್ತಿದೆ. ಅದನ್ನು ಮಾನ್ಯ ಬಂಗಾರಪ್ಪನವರು ಮುಗಿಸುತ್ತಾರೇನೋ ಎಂದುಕೊಂಡರೆ, ಅವರು ಅದೇ ಧಾಟಿಯಲ್ಲಿ ಮುಂದುವರಿಸಿದರು. ಅದು ಅಲ್ಲಿಗೇ ಮುಗಿದು ಹೋಗಿದ್ದರೆ ಚೆನ್ನಾಗಿರುತ್ತಿತ್ತು. ಆದರೆ, ಇನ್ನೊಂದು ಪ್ರಶ್ನೆಯನ್ನು ಎತ್ತಿ ಅದಕ್ಕೆ ಅವರು ಉತ್ತರಕೊಟ್ಟು, ಅವರು ಈಗ ಇನ್ನೆರಡು ಪ್ರಶ್ನೆಗಳನ್ನು ಮಾನ್ಯ ಮುಖ್ಯಮಂತ್ರಿಗಳು ಎತ್ತಿದ್ದಾರೆ. ಅದೇನೆಂದರೆ, ಒಂದು ಬಾಟ್ಲಿಂಗ್‌ನಲ್ಲಿ ಅವ್ಯವಹಾರ, ಇನ್ನೊಂದು ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡುತ್ತೇವೆ ಎಂದು ಹೇಳುತ್ತಾರೆ.

ಅಧ್ಯಕ್ಷರು.—ನೀವು ಮೊದಲು ಕುಳಿತುಕೊಳ್ಳಿ ಕೃಷ್ಣನ್‌ರವರೆ.

ಶ್ರೀ ಜಿ. ನಾರಾಯಣ್ ಕುಮಾರ್.—ಅಧ್ಯಕ್ಷರೇ, ಪಿ ಹ್ಯಾಸ್ ಟೇಕನ್ ಮನಿ, ಫಾರ್ ಮೆಡಿಕಲ್ ಕಾಲೇಜ್.

ಅಧ್ಯಕ್ಷರು.—ನಾರಾಯಣ್ ಕುಮಾರ್‌ರವರೆ, ತಾವು ಕುಳಿತುಕೊಳ್ಳಿ. ಈಗಾಗಲೇ ತುಂಬಾ ಹೇಳಿಯಾಗಿದೆ, ಈಗ ನೀವು ಏನು ಮಾತನಾಡಿದರೂ ಅದು ರಿಕಾರ್ಡ್‌ಗೆ ಹೋಗುವುದಿಲ್ಲ. ಬಂಗಾರಪ್ಪನವರೆ, ನೀವು ಮುಕ್ತಾಯ ಮಾಡಿ.

ಶ್ರೀ ಜಿ. ನಾರಾಯಣ್ ಕುಮಾರ್.—ಆ ಲಂಚ ಪಡೆದು ಕೃತಜ್ಞತೆಯ ದೃಷ್ಟಿಯಿಂದ... ಈ ಸದನದ ಕಾರ್ಯಕಲಾಪಗಳನ್ನು ಹಾಳು ಮಾಡಿದ್ದಾರೆ. ರಾಜ್ಯದ ಜನತೆಯ ಬಗ್ಗೆ ಕೆಲವೇ... ..

( ಗೊಂದಲ )

ಅಧ್ಯಕ್ಷರು.—ನಾರಾಯಣ್ ಕುಮಾರ್‌ರವರೇ, ತಾವು ದಯವಿಟ್ಟು ಕುಳಿತುಕೊಳ್ಳಿ. ಬಂಗಾರಪ್ಪನವರೆ ತಾವು ಮೊದಲು ಚೆನ್ನಾಗಿ ಮಾತನಾಡಿದ್ದೀರಿ. ಒಂದು ನಿಮಿಷದಲ್ಲಿ ಹೇಳಿ ಮುಗಿಸಿಬಿಡಿ

ಶ್ರೀ ಎಸ್. ಬಂಗಾರಪ್ಪ.—ನಾವು ಹೇಳುವುದು ನಿಮಗೆ ಕೆಲವು ರುಚಿ ಕಾಣುತ್ತದೆ, ಕೆಲವು ಕಾಣುವುದಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಮಾತನಾಡುವಾಗ ತಮ್ಮ ಸ್ಥಿಮಿತ ತಪ್ಪಿಸಿಕೊಂಡರು ಎಂದು ಸ್ಪಷ್ಟವಾಗಿ ಗೊತ್ತಾಯಿತು. ನಾನು ಹೇಳಿದ್ದು ದಿಸೀಜ್ಡ್ ನಂದ ಕುಮಾರ್ ಬ್ರದರ್ ಏನಿದ್ದಾರೆ ಅವರು ಕೊಟ್ಟ ಕಂಪ್ಲೇಂಟ್‌ನಲ್ಲಿ ಈ ರೀತಿ ಬರೆದಿದ್ದಾರೆ...

ಅಧ್ಯಕ್ಷರು.—ಅದು ಈಗ ಬೇಡ ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ಈ ಹೇಳಿಕೆಯಲ್ಲಿರತಕ್ಕದ್ದು ಏನೆಂದರೆ, "ನಮ್ಮ ಬ್ರದರ್‌ನ್ನು ಪೋಲೀಸ್ ಇಲಾಖೆಯವರೇ ಕೊಲ್ಲಿಸಿದ್ದಾರೆ" ಎನ್ನುವ ಮಾತು ಸರ್ಕಾರದ ಮೇಲೆ ರಿಫ್ಲೆಕ್ಟ್ ಆಗುತ್ತದೆ

( ಗೊಂದಲ )

ಅಧ್ಯಕ್ಷರು.—ಅದರ ಆವಶ್ಯಕತೆ ಇಲ್ಲ. ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡುತ್ತೇವೆಂದು ಹೇಳಿದ್ದಾರೆ. ಅಲ್ಲಿಗೆ ತಾವು ಹಾಜರುಪಡಿಸಿ.

( ಗೊಂದಲ )

ಅಧ್ಯಕ್ಷರು.—ಹಿರಿಯರಾದ ದೇವೇಗೌಡರು ಏನು ಹೇಳುತ್ತಾರೆ ಕೇಳೋಣ. ನೀವು ಹೊಸದಾಗಿ ಬಂದಿದ್ದೀರಿ, ಸ್ವಲ್ಪ ಕೇಳಿ.

ಶ್ರೀ ಹೆಚ್. ಡಿ. ದೇವೇಗೌಡ ( ಲೋಕೋಪಯೋಗಿ ಸಚಿವರು ).—ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಶ್ರೀಮಾನ್ ರಾಚಯ್ಯನವರ ಮೇಲೆ ಹಕ್ಕು ಬಾಧ್ಯತಾ ನಿರ್ಣಯವನ್ನು ಮಂಡನೆ ಮಾಡಿ, ಅದರ ಬಗ್ಗೆ ಇದನ್ನು ಹಕ್ಕು ಬಾಧ್ಯತಾ ಸಮಿತಿಗೆ ಕಳುಹಿಸಬೇಕೆಂದು ಪ್ರತಿಪಾದನೆ ಮಾಡಿರತಕ್ಕ ವಿಷಯದ ಬಗ್ಗೆ ನಾನಾ ಬೆಳಕನ್ನು ಚೆಲ್ಲುತಕ್ಕಂತಹ ಪ್ರಯತ್ನ ಮಾಡಿದ್ದಾರೆ. ದಿವಂಗತ ನಂದ ಕುಮಾರ್ ಸಹೋದರರು ಕೊಟ್ಟಿರತಕ್ಕಂತಹ ಕಂಪ್ಲೇಂಟ್‌ನ್ನು ಅವರು ಪ್ರಸ್ತಾಪ ಮಾಡಿದ್ದಾರೆ. ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಸದನದಲ್ಲಿ ಅವರ ರಾಜಕೀಯ ಕೊಲೆ ಮಾಡತಕ್ಕ ಉದ್ದೇಶದಿಂದ ಈ ಎಲ್ಲಾ ವಿಷಯಗಳನ್ನು ಮಾನ್ಯ ಗೃಹ ಸಚಿವರು ಸದನದಲ್ಲಿ ತಂದಿದ್ದಾರೆ ಎಂಬ ಆರೋಪಣೆಯನ್ನು ನೇರವಾಗಿ ಒಂದು ನಿರ್ಣಯವನ್ನು ಸಭೆಯ ಮುಂದಿಟ್ಟಿದ್ದಾರೆ. ಈ ಎಲ್ಲಾ ವಿಷಯಗಳನ್ನೂ ನಾವು ನ್ಯಾಯಾಂಗ ತನಿಖೆಗೆ ಕಳಿಸುತ್ತೇವೆ. ನ್ಯಾಯಾಂಗ ವಿಚಾರಣೆಯಲ್ಲಿ ಮಾನ್ಯ ಬಂಗಾರಪ್ಪನವರ ಕೈವಾಡ ಇತ್ತೋ, ಇಲ್ಲವೋ, ಮಾನ್ಯ ರಂಗನಾಥ್ ಹಲ್ಲೆ ಪ್ರಕರಣದ ಬಗ್ಗೆಯೂ ಎಲ್ಲಾ ವಿಷಯಗಳನ್ನು ಸಂಪೂರ್ಣ ತನಿಖೆ ಮಾಡಿ, ಆ ತನಿಖೆಯಲ್ಲಿ ಎಲ್ಲಾ ವಿಷಯಗಳು ಹೊರ ಬರುವವರೆಗೂ ನಾವು ಇಲ್ಲಿ ಆ ಬಗ್ಗೆ ಚರ್ಚೆಯನ್ನು ಮುಂದುವರಿಸುವುದು ಅಪ್ರಕೃತವಾಗುತ್ತದೆ. ಅದು ಪೋಲೀಸರ ಮೇಲೂ ವಿಚಾರಣೆಯಾಗುತ್ತದೆ. ಏತಕ್ಕೆಂದರೆ, ನ್ಯಾಯಾಂಗ ತನಿಖೆ ಎಂದರೆ, ಶ್ರೀಮಾನ್ ರಮೇಶ್ ಕುಮಾರ್‌ರವರ ಟೇಪ್ ಆಗಬಹುದು ...

( ಗೊಂದಲ )

ಅಧ್ಯಕ್ಷರು.—ನೋ ಬಡಿ ಷುಡ್ ಇಂಟರ್ ಫೀಯರ್.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೆ, ರಮೇಶ್ ಕುಮಾರ್‌ರವರ ಟೇಪ್ ಆಗಬಹುದು, ಹಾಗೂ ನಂದ ಕುಮಾರ್ ಕೊಲೆಗೆ ಒಂದು ವೇಳೆ ಅವರು ಜೀವಂತವಾಗಿದ್ದಿದ್ದರೆ, ಎವಿಡೆನ್ಸ್ ಹೊರಗೆ ಬರುತ್ತದೆ ಎಂದು ಕೊಲೆ ಮಾಡಿಸಿದ್ದಾರೆಯೋ ಎಂಬ ವಿಷಯವನ್ನು ಒಳಗೊಂಡಂತೆ ಬರುತ್ತದೆ. ಇದರ ಹಿಂದೆ ಇರತಕ್ಕ ಕೈವಾಡ ಯಾರು ಯಾರು ಎಂಬುದನ್ನು ಕಂಡುಹಿಡಿಯಲು ಟರ್ಮ್ಸ್ ಆಫ್ ರೆಫರೆನ್ಸ್‌ನಲ್ಲಿ ಹಾಕುತ್ತೇವೆ. ಅದಕ್ಕೆ ಏನೂ ಚಿಂತೆ ಇಲ್ಲ. ಪೋಲೀಸ್ ಅಧಿಕಾರಿ ತೆಗೆದುಕೊಂಡಿರತಕ್ಕಂತಹ ಹೇಳಿಕೆ, ಇದರ ಪ್ರಾಮಾಣಿಕತೆ, ಅವರ ಹತ್ತಿರ ಇರತಕ್ಕ ಕಂಪ್ಲೇಂಟ್, ಶ್ರೀ ರಮೇಶ್ ಕುಮಾರ್‌ರವರ ಹತ್ತಿರ ಇರತಕ್ಕ ಟೇಪ್, ಈ ಎಲ್ಲಾ ವಿಷಯಗಳನ್ನು ಪರಿಶೀಲನೆ ಮಾಡಲು ಸಿಟಿಂಗ್ ಹೈಕೋರ್ಟ್ ನ್ಯಾಯಾಧೀಶರಿಗೆ ಒಪ್ಪಿಸುತ್ತೇವೆಂದು ಈಗಾಗಲೇ ಸಭಾ ನಾಯಕರು

ಹೇಳಿದ್ದಾರೆ. ಆದ್ದರಿಂದ ಇನ್ನು ಮುಂದೆ ಹಕ್ಕು ಚ್ಯುತಿಯ ಬಗ್ಗೆ ಚರ್ಚೆ ಅನಾವಶ್ಯಕ. ತಾವು ತೀರ್ಪನ್ನು ಕೊಡಬೇಕೆಂದು ಹೇಳಿ......

( ಗೊಂದಲ )

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೆ, ಇದನ್ನು ಇಲ್ಲಿಗೇ ನಿಲ್ಲಿಸಿ. ಮುಂದಿನ ವಿಷಯಕ್ಕೆ ಹೋಗಬೇಕೆಂದು ಅಧ್ಯಕ್ಷರನ್ನು ಕೋರುತ್ತೇನೆ.

ಅಧ್ಯಕ್ಷರು.—ಬಂಗಾರಪ್ಪನವರೆ, ಸರ್ಕಾರ ಹೇಳಿದ್ದು ಕೇಳಿದಿರಲ್ಲಾ, ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡಲು ಒಪ್ಪಿಕೊಂಡಿದ್ದಾರೆ. Let us close the matter. There the matter ends.

SRI H. D. DEVEGOWDA.—The whole matter is concluded when it is agreed to refer it to the Judicial Enquiry. ಅದರ ಬಗ್ಗೆ ಪ್ರಶ್ನೆ ಈಗ ಇಲ್ಲ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ಕಂಪ್ಲೇಂಟ್ ವಿಚಾರವನ್ನು ಇಲ್ಲಿಗೆ ಬಿಡುತ್ತೇನೆ ಇನ್ನು ಎರಡು ವಿಚಾರ ಇದೆ......

ಅಧ್ಯಕ್ಷರು.—ಪ್ರಿವಿಲೇಜ್ ಬಗ್ಗೆ ಬಿಟ್ಟು ಬಿಡಿ.

ಶ್ರೀ ಎಸ್. ಬಂಗಾರಪ್ಪ.—ಇನ್ನು ಯಾವುದರ ಬಗ್ಗೆ ಹೇಳುತ್ತೇನೆ......

ಅಧ್ಯಕ್ಷರು.—ಈಗ ಮುಕ್ತಾಯ ಮಾಡಿಬಿಡಿ.

ಶ್ರೀ ಎಸ್. ಬಂಗಾರಪ್ಪ.—ಹೊಸ ಹೊಸ ಪಾಯಿಂಟ್ ಎತ್ತಿಕೊಂಡು ಹೋದರೆ, ಮುಕ್ತಾಯ ಮಾಡಿಕೊಂಡು ಹೋಗುವುದಕ್ಕೆ ಆಗುತ್ತದೆಯೆ ?

ಶ್ರೀ ಬಿ. ಸೋಮಶೇಖರ್.—ಎಲ್ಲ ವಿಷಯಗಳನ್ನು ನ್ಯಾಯಾಂಗ ತನಿಖೆಗೆ ಒಳಪಡಿಸುತ್ತೇವೆಂದು ಹೇಳಿದ ಮೇಲೆ, ಮಾನ್ಯ ಬಂಗಾರಪ್ಪನವರು ಹೊಸದಾಗಿ ಹೇಳುವುದೇನು ಇದೆ ?

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ವಿರೋಧ ಪಕ್ಷದ ನಾಯಕರು ಬಹುಶಃ ಬಾಟ್ಲಿಂಗ್ ಕೇಸಿನಲ್ಲಿ ಯಾರಿಗೆ ಲೈಸೆನ್ಸ್ ಕೊಡಲಿಲ್ಲವೋ ಅಂಥವರಿಂದ ನೀವು ದುಡ್ಡು ತೆಗೆದುಕೊಂಡಿದ್ದಾರೆ ಎಂದು ಹೇಳಿದ ವಿಚಾರದಲ್ಲಿ ಹೇಳಬಹುದು ಅಂತ ಕಾಣುತ್ತೆ.

ಶ್ರೀ ಆದ್ಯಂತಾಯ.—ಲೈಸೆನ್ಸ್ ಕೊಟ್ಟವರಿಂದ ದುಡ್ಡು ನೀವು ತೆಗೆದುಕೊಂಡಿದ್ದೀರಿ.

(ಗೊಂದಲ)

ಶ್ರೀ ಜೆ. ಹೆಚ್. ಪಟೇಲ್.—ಯಾರಿಗೆ ಲೈಸೆನ್ಸ್ ಕೊಟ್ಟಿಲ್ಲವೋ ಅಂಥವರಿಂದ ದುಡ್ಡು ತೆಗೆದುಕೊಂಡಿರುವುದನ್ನು ಪ್ರೂವ್ ಮಾಡುತ್ತೇನೆಂದು ಮಾನ್ಯ ಸಭಾನಾಯಕರು ಹೇಳಿರುವುದೂ ಕೂಡ ಪ್ರಿವಿಲೇಜ್ ಕಮಿಟಿಗೆ ರೆಫರ್ ಆಗುತ್ತದೆ, ಇದರ ಬಗ್ಗೆ ಚರ್ಚೆ ಏಕೆ ? ಸುವೋ-ಮೋಟೋ ಅವರು ಒಪ್ಪಿ ಕೊಂಡಿದ್ದಾರೆ.

ಶ್ರೀ ಎಂ. ರಘುಪತಿ.—ಸ್ವಾಮಿ, ಪಾಯಿಂಟ್ ಆಫ್ ಆರ್ಡರ್.

ಶ್ರೀ ಎಸ್. ಬಂಗಾರಪ್ಪ.—ಅವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ.

ಶ್ರೀ ಎಂ. ರಘುಪತಿ.—ಅವರು ಎತ್ತಿಲ್ಲ.

ಅಧ್ಯಕ್ಷರು.—ಅವರು ನ್ಯಾಯಾಂಗ ತನಿಖೆ ಮಾಡುತ್ತೇವೆಂದು ಒಪ್ಪಿಕೊಂಡಿದ್ದಾರೆ. ಮತ್ತೇ ಅದೇ ವಿಷಯವನ್ನು ಏತಕ್ಕೆ ಹೇಳುತ್ತೀರಿ.

ಶ್ರೀ ರಾಮಕೃಷ್ಣ ಹೆಗಡೆ.—ಸ್ವಾಮಿ, ನಾನು ಮತ್ತೆ ಹೇಳುತ್ತೇನೆ, ಪ್ರಿವಿಲೇಜ್ ಸಮಿತಿಯ ಮುಂದೆ ಅವರ ಹೇಳಿಕೆಯನ್ನು ಹೇಳಲಿ, ನನ್ನ ಹೇಳಿಕೆಯನ್ನು ಹೇಳುತ್ತೇನೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಅವರು ಉತ್ತರ ಕೊಟ್ಟಿದ್ದಕ್ಕೆ ನಾವು ಉತ್ತರ ಕೊಡುವುದು ಬೇಡವೆ?

ಅಧ್ಯಕ್ಷರು.—ತಮಗೆ ಒಂದು ತಾಸು ಕೊಟ್ಟಿದ್ದೇನೆ. ತಾವು ಮಾತನಾಡುವಾಗ ಯಾರೂ ಕೂಡ ಮಧ್ಯೆ ಬಂದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಅವರು ಒಂದು ತಾಸು ತೆಗೆದುಕೊಂಡಿಲ್ಲವೆ ?

ಅಧ್ಯಕ್ಷರು.—ನ್ಯಾಯಾಂಗ ತನಿಖೆ ಮಾಡಿಸುತ್ತೇವೆಂದು ಹೇಳಿದ್ದಾರೆ. ಅಲ್ಲಿಗೆ ವಿಷಯವನ್ನು ಬಿಟ್ಟುಬಿಡಿ.

ಶ್ರೀ ಎಸ್. ಬಂಗಾರಪ್ಪ.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸಭಾನಾಯಕರು, ಮಹಾನ ಮುಖ್ಯಮಂತ್ರಿಗಳು ಎರಡು ವಿಚಾರವನ್ನು ಎತ್ತಿದ್ದಾರೆ.

ಶ್ರೀ ಆರ್. ವೆಂಕಟರಾಮಯ್ಯ.—ಸ್ವಾಮಿ, ನಾನು ಒಂದು ವಿಚಾರವನ್ನು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ದಯವಿಟ್ಟು ಕ್ಷಮಿಸಿ, ನಾನು ಯೀಲ್ಡ್ ಆಗಿಲ್ಲ. ಸ್ವಾಮಿ ಮಾನ್ಯ ಸಭಾನಾಯಕರು ಎರಡು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ಪ್ರಿವಿಲೇಜು ಬಗ್ಗೆ ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು.—ಅದನ್ನು ಬಿಟ್ಟುಬಿಡಿ.

ಶ್ರೀ ಎಸ್. ಬಂಗಾರಪ್ಪ.—ತಾವು ಸ್ವಲ್ಪ ಸಾವಧಾನವಾಗಿ ಆಲಿಸಬೇಕು.

ಅಧ್ಯಕ್ಷರು.—ಬೇಕಾದಷ್ಟು ಆಲಿಸಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಇನ್ನೂ ಸ್ವಲ್ಪ ಆಲಿಸಬೇಕೆಂದು ಕೇಳಿಕೊಳ್ಳುತ್ತೇನೆ. ನಿನ್ನೆ ದಿವಸ ತಾವು ಈ ವಿಷಯವನ್ನು ಪ್ರಿವಿಲೇಜ್ ಕಮಿಟಿಗೆ ರೆಫರ್ ಮಾಡುತ್ತೇನೆಂದು ಹೇಳಿದಿರಿ. ಪ್ರಿವಿಲೇಜ್ ಕಮಿಟಿಗೆ ರೆಫರ್ ಮಾಡಿ ಎನ್ನುವ ಒತ್ತಾಯ ನಮ್ಮದು ಇತ್ತು. ಸಭಾನಾಯಕರು ಇಲ್ಲಿ ಗುರುತರವಾದ ಆಪಾದನೆಯನ್ನು ಮಾಡಿದ್ದಾರೆ.

ಶ್ರೀ ಜಿ. ನಾರಾಯಣಕುಮಾರ್.—ಬಂಗಾರಪ್ಪನವರು ಸಭಾನಾಯಕರ ಬಗ್ಗೆ ಹೇಳುತ್ತಿದ್ದಾರೋ? ಗೃಹ ಮಂತ್ರಿಗಳ ಬಗ್ಗೆ ಹೇಳುತ್ತಿದ್ದಾರೋ ?

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಇದಕ್ಕೆ ಸಂಬಂಧಪಟ್ಟ ಎಲ್ಲ ವಿಚಾರಗಳನ್ನೂ ನ್ಯಾಯಾಂಗ ತನಿಖೆಗೆ ಒಪ್ಪಿಸೋಣ. ಸಿಟಿಂಗ್ ಹೈಕೋರ್ಟಿನ ಜಡ್ಜಗಳಿಂದ ತನಿಖೆ ಮಾಡಿಸೋಣವೆಂದು ಹೇಳಿದ್ದಾರೆ. ಅದು ಸರ್ಕಾರದ ತೀರ್ಮಾನ. ಯಾವರೀತಿಯ ವಿಚಾರಣೆ ಮಾಡಿದರೂ ಅದಕ್ಕೆ ನಾನು ಸಿದ್ಧ ಇರತಕ್ಕವನು. ಅವರು ಮತ್ತೊಂದು ಮಾತನ್ನು ಕೂಡ ಹೇಳಿದರು. ಅರ್ರ್ಯಾಕ್ ಬಾಟ್ಲಿಂಗ್ ಲೈಸೆನ್ಸ್ ಯಾರಿಗೆ ಸಿಗಲಿಲ್ಲ. ಅದು ಗಲಾಟೆಯಲ್ಲಿ ಸರಿಯಾಗಿ ಗೊತ್ತಾಗಲಿಲ್ಲ ಎಂಬುದು ಮಾನ್ಯ ಪಟೇಲರು ವಿವರಣೆ ಕೊಟ್ಟಮೇಲೆ ಗೊತ್ತಾಯಿತು. ಎರಡು ಜನಕ್ಕೆ ಲೈಸೆನ್ಸ್ ಸಿಗಲಿಲ್ಲ ಅವರಿಂದ ದುಡ್ಡು, ಹಣ ತೆಗೆದುಕೊಂಡಿದ್ದೇನೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಅವರು ಗುರುತರವಾದ ಆಪಾದನೆ ಮಾಡಿದ್ದಾರೆ. ನಾನು ಸ್ಪಷ್ಟಪಡಿಸುತ್ತೇನೆ. ನನ್ನ ರಾಜಕೀಯ ಜೀವನದಲ್ಲಿ ಯಾವ ಹಣವನ್ನೂ ಮುಟ್ಟಿಲ್ಲ, ಮುಟ್ಟುವುದೂ ಇಲ್ಲ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಯಾರೂ ಕೂಡ ಕೇಳಿದ ತಕ್ಷಣ ಲಂಚ ಕೊಡುವುದಿಲ್ಲ; ಸುಮ್ಮನೆ ಕೂತಕೊಂಡರೂ ಲಂಚ ಕೊಡುವುದಿಲ್ಲ. ಸ್ವಲ್ಪ ತಾಳಿ ಸ್ವಾಮಿ, ಅವರು ಹೇಳಿರತಕ್ಕ ಮಾತನ್ನು

(ಗೊಂದಲ)

ಸಂಪೂರ್ಣವಾಗಿ ನಿರಾಕರಿಸುತ್ತೇನೆ. ಇನ್ನು ಎರಡನೇ ವಿಚಾರ ಯಾರು ಗ್ರಾಂಟೀಸ್ ಅಲ್ಲ, ೮ ಜನ ಬಿಟ್ಟು, ೧೩೧ ಅರ್ಜಿಗಳ ಪೈಕಿ ಎರಡು ಜನರಿಂದ ಲಂಚ ತೆಗೆದುಕೊಂಡಿದ್ದೇನೆ ಎನ್ನುತಕ್ಕ ಮಾತನ್ನು ಹೇಳಿದ್ದಾರೆ. ಅವರಿಗೇನಾದರೂ xx ಇದ್ದರೆ, ನಿಮ್ಮಲ್ಲಿ ರಾಜಕೀಯ xx ಇದ್ದರೆ......

(ಗೊಂದಲ)

ಅಧ್ಯಕ್ಷರು.—ಬಂಗಾರಪ್ಪನವರೇ ನೀವು ಆಡಿದಂಥ ನರನಾಡಿ ಎನ್ನುವ ಪದಗಳನ್ನು ತೆಗೆದು ಹಾಕಿದ್ದೇನೆ.

xx Expunged as ordered by the chair.........

ಶ್ರೀ ಎಸ್. ಬಂಗಾರಪ್ಪ.—ನಾನಂ ಕೊನೇ ವಾಕ್ಯಕ್ಕೆ ಬಂದಿದ್ದೇನೆ.

(ಗೊಂದಲ)

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಸಭಾಪತಿಗಳೇ, ವಿರೋಧ ಪಕ್ಷದ ನಾಯಕರು ಬಳಸಿರತಕ್ಕ ಪದಗಳನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಹೇಳಿ.

ಅಧ್ಯಕ್ಷರು —ಎಲ್ಲರೂ ಕೂತುಕೊಳ್ಳಿ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ವಿರೋಧ ಪಕ್ಷದ ನಾಯಕರು ಸರಿಯಾಗಿ ಮಾತ ನಾಡುವಂತೆ ಹೇಳಿ.

ಶ್ರೀ ಎಸ್. ಬಂಗಾರಪ್ಪ.—ನೀವು ಸುಮ್ಮನೆ ಕೂತುಕೊಳ್ಳಿ ಅಮ್ಮ, ಇದೆಲ್ಲಾ ನಿಮಗೆ ಗೊತ್ತಾಗೋದಿಲ್ಲ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಸ್ವಾಮಿ, ಈ ಮನೆಯಲ್ಲಿ ಮಹಿಳಾ ಸದಸ್ಯರೂ ಇದ್ದಾರೆ. ಅವಾಚ್ಯ ಶಬ್ದಗಳನ್ನು ಇಲ್ಲಿ ಬಳಸುತ್ತುದು ಸರಿಯಲ್ಲ. ಅನ್‌ಪಾರ್ಲಿಮೆಂಟರಿ ಪದಗಳನ್ನು ಅವರು ವಾಪಸ್ಸು ತೆಗೆದುಕೊಳ್ಳಲಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಈ ಸಂದರ್ಭದಲ್ಲಿ ಪ್ರಿವಿಲೇಜ್ ಕಮಿಟಿಗೆ ಅಲ್ಲ, ಯಾವ ರೀತಿಯ ವಿಚಾರಣೆಯನ್ನಾದರೂ ಮಾಡಲಿ ಅದಕ್ಕೆ ಸಿದ್ಧನಿದ್ದೇನೆ. ನ್ಯಾಯಾಂಗ ತನಿಖೆಗೆ ಬೇಕಾದರೂ ಹಾಕಿಕೊಳ್ಳಲಿ.

ಶ್ರೀ ಎಸ್. ಬಂಗಾರಪ್ಪ.—ಈ ಅರ್‍ಯಾಕ್ ಬಾಟ್ಲಿಂಗ್ ಕಂಟ್ರಾಕ್ಟ್ ಕೇಸ್ ಬಗ್ಗೆ ಹೈಕೋರ್ಟ್ ಜಡ್ಜ್‌ಮೆಂಟ್ ಬಂದ ಮೇಲೆ ಅವರ ಸ್ಥಿಮಿತವೇ ತಪ್ಪಿಹೋಗಿದೆ ಎಂದು ಗೊತ್ತಾಗಿದೆ. ಇವರು ಕೇರಳದ ಕುರುವಿಲ್ಲ, ತಮಿಳ್ನಾಡಿನ ಒಡೆಯರ್ ಜೊತೆ ಬೇನಾಮಿ ಟ್ರಾನ್ಸಾಕ್ಷನ್‌ನಿಂದ ೧೨ ಕೋಟಿ ರೂಪಾಯಿ ಲಂಚವನ್ನು ನೀವೇ ತಿಂದಿದ್ದೀರಿ.

(ಗೊಂದಲ)

ಅಧ್ಯಕ್ಷರು.—ನಥಿಂಗ್ ವಿಲ್ ಗೋ ಆನ್ ರೆಕಾರ್ಡ್. ಈಗ ಬಂಗಾರಪ್ಪನವರೇ ಎಲ್ಲ ಹೇಳಿ ಯಾಗಿದೆ. ಇಲ್ಲಿಗೇ ಮುಗಿಸೋಣ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ದೇವೇಗೌಡರು ಮಾತನಾಡುವುದಕ್ಕೆ ನಿಂತಿರುವುದರಿಂದ ನಾನು ಅಡ್ಡಿ ಮಾಡುತ್ತಿದ್ದೇನೆ ಎಂದು ಅಲ್ಲ.

ಅಧ್ಯಕ್ಷರು.—ನಾನು ಈಗ ರೂಲಿಂಗ್ ಕೊಡಬೇಕಾಗುತ್ತದೆ. ನೀವು ಕೂರಿ, ಅವರು ಹೇಳೋದನ್ನು ಕೇಳೋಣ.

(ಗೊಂದಲ)

ಶ್ರೀ ಹೆಚ್. ಡಿ. ದೇವೇಗೌಡ.—ಸ್ವಾಮಿ ಇಷ್ಟೆ ; ಹಕ್ಕುಬಾಧ್ಯತಾ ವಿಷಯದಲ್ಲಿ ಗೃಹಮಂತ್ರಿಗಳ ಮೇಲೆ ಇರುವ ವಿಷಯವನ್ನು ನ್ಯಾಯಾಂಗ ವಿಚಾರಣೆಗೆ ಒಪ್ಪಿಸುವುದಾಗಿ ಈಗಾಗಲೇ ನಮ್ಮ ಸಭಾ ನಾಯಕರು ಹೇಳಿದ್ದಾರೆ. ಆದ್ದರಿಂದ ಈ ಪ್ರಕರಣವನ್ನು ಇಲ್ಲಿಗೇ ಮುಗಿಸಬೇಕೆಂದು ವಿನಂತಿ ಮಾಡಿ ಕೊಳ್ಳುತ್ತಾ ಎರಡನೆಯ ವಿಷಯ, ಈಗ ಬಾಟ್ಲಿಂಗ್ ಹಗರಣದಲ್ಲಿ ಮುಖ್ಯಮಂತ್ರಿಗಳು ವಿರೋಧ ಪಕ್ಷದ ನಾಯಕರ ಮೇಲೆ ನೇರವಾಗಿ ಆಪಾದನೆ ಮಾಡಿದ್ದಾರೆ. ಅವರು ಮತ್ತೊಂದು ಆರೋಪ ಮಾಡಿದ್ದಾರೆ: ಒಡೆಯರ್ ಅವರಿಂದ ೧೨ ಕೋಟಿ ರೂ.ಗಳನ್ನು ವಿರೋಧ ಪಕ್ಷದ ನಾಯಕರು—

(ಗೊಂದಲ)

ಸ್ವಾಮಿ ಸ್ವಲ್ಪ ಕೇಳಿ, ೨೫ ಕೋಟಿ ತೆಗೆದುಕೊಂಡಿದ್ದಾರೆ ಎಂದು ಹೇಳಲಿ, ೧೦೦ ಕೋಟಿಯನ್ನೇ ತಿಂದಿದ್ದಾರೆಂದು ಹೇಳಲಿ ಈ ಎರಡೂ ವಿಷಯವನ್ನು ಇವತ್ತು ಹಕ್ಕುಬಾಧ್ಯತಾ ಸಮಿತಿಗೆ ಕಳಿಸಿ ಕೊಡಿ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಆರ್ ಯು ಪ್ರಿಪೇರ್ಡ್ ಫಾರ್ ದಿ ಜ್ಯುಡಿಶಿಯಲ್ ಎನ್‌ಕ್ವಯರಿ ?

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ನಿಮ್ಮ ಪೌರುಷ ಸಾಕು.

ಶ್ರೀ ಎಸ್. ಬಂಗಾರಪ್ಪ.—ನಿಮ್ಮ ನಾಟಕ ಸಾಕು.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ ನಾನು ಹೇಳಿದ್ದೇನೆ, ಅವರು ಯಾರಿಗೆ ಅರ್ಜಿ ಹಾಕಿ ಬಾಟ್ಲಿಂಗ್ ಕಂಟ್ರಾಕ್ಟ್ ಸಿಗಲಿಲ್ಲವೋ ಅಂಥವರಿಂದ ದುಡ್ಡು ತಿಂದಿದ್ದಾರೆಂದು ಹೇಳಿದ ಈ ಎರಡೂ ಪ್ರಕರಣಗಳನ್ನು ಲೋಕಾಯುಕ್ತಕ್ಕೆ ಕಳಿಸಿಕೊಡುತ್ತೇನೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಜ್ಯುಡಿಶಿಯಲ್ ಎನ್‌ಕ್ವಯರಿಯೇ ಆಗಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಅದೂನೂ ಜ್ಯುಡಿಶಿಯಲ್ ಎನ್‌ಕ್ವಯರಿಯೇ.

ಶ್ರೀ ಎಸ್. ಬಂಗಾರಪ್ಪ.—ನೋ ನೋ.

ಶ್ರೀ ರಾಮಕೃಷ್ಣ ಹೆಗಡೆ.—ಅಧ್ಯಕ್ಷರೇ, ನಾನು ಈಗಾಗಲೇ ಸರ್ಕಾರದ ನೀತಿಯನ್ನು ಹೇಳಿದ್ದೇನೆ ಭ್ರಷ್ಟಾಚಾರಕ್ಕೆ ಸಂಬಂಧಪಟ್ಟಂಥ ಯಾವುದೇ ಒಂದು ಆರೋಪ ಬಂದರೆ ಈಗಾಗಲೇ ಲೋಕಾಯುಕ್ತ ನೇಮಕವಾಗಿದೆ. ಅಲ್ಲಿಗೆ ಹೋಗಲಿ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಲೋಕಾಯುಕ್ತ ಬೇಕಾಗಿಲ್ಲ. ಜ್ಯುಡಿಶಿಯಲ್ ಎನ್‌ಕ್ವಯರಿಯೇ ಮಾಡಿಸಿ. ನೀವು ಏಕೆ ಹೆದರುತ್ತಿದ್ದೀರಿ ?

(ಗೊಂದಲ)

ಅಧ್ಯಕ್ಷರು.—ದಯಪಿಟ್ಟು ಎಲ್ಲರೂ ಕೂರಿ. ಜ್ಯುಡಿಶಿಯಲ್ ಎನ್‌ಕ್ವಯರಿಗೆ ಹಾಕುತ್ತೇನೆಂದು ಅವರು ಹೇಳಿದ್ದಾರೆ. ಈಗ The matter is closed.

(ಗೊಂದಲ)

ಅಧ್ಯಕ್ಷರು.—ಇನ್ನು ಮುಂದೆ ೩.೩೦ರ ವೇಳೆ ಸಭೆಯ ಕಾರ್ಯಕಲಾಪಗಳು.